ed No. M. 1393.

doc-40
T-P-14

ಕಂಠೀರವ

KANTEERAVA

KANARESE, BI-WEEKLY

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

ಸಂಪುಟ ೨೩ | ಮಂಗಳೂರು, ೧೯೪೧ನೇ ಇಸವಿ ಒಕ್ಟೋಬರ ತಾರೀಕು ೭ನೇ ಮಂಗಳವಾರ | ಸಂಚಿಕೆ ೫೪

VOL. XXIII | MANGALORE, TUESDAY, OCTOBER 7, 1941 | NO. 54

ಜಗತ್ತಿನ ದೃಷ್ಟಿ ಈ ಕಡೆಗೆ

ರಷ್ಯದ ೪ ಪ್ರಧಾನ ನಗರಗಳಿಗೆ ತಿರುಗಿದೆ!

ರಷ್ಯಾ—ಜರ್ಮನಿಗಳೊಳಗಣ ಈ ಘೋರ ಯುದ್ಧವು ಈಗ ಉಲ್ಬಣಾವಸ್ಥೆಗೆ ಏರಿದೆ. ರಷ್ಯದ ಸೈನಿಕರು, ಅಪ್ರತಿಮ ಶೌರ್ಯಸಾಹಸಗಳಿಂದ ಹೋರಾಡಿ, ಜರ್ಮನ್ ಸೈನ್ಯಗಳಿಗೆ ಅಪಜಯದ ಸವಿಯನ್ನು ತೋರಿಸಿಕೊಟ್ಟಿದ್ದಾರೆ. ಆದರೂ ಅಪಾರ ನಷ್ಟಗಳನ್ನು ಸಹಿಸಿಕೊಂಡೂ ಜರ್ಝರಿತವಾಗಿರುವ ನಾಜೀ ವಿಜಯಮಂತ್ರದ ಯಂತ್ರ ಮೆಲ್ಲಮೆಲ್ಲನೆ ರಷ್ಯದಲ್ಲಿ ಮುಂದುವರಿಯುತ್ತಿದೆ. ರಷ್ಯದ 'ಮಿತ್ರರಾಷ್ಟ್ರ'ಗಳಿಂದ ಬೇಕಾದಷ್ಟು ಸಹಾಯವು ನಿರಂತರವಾಗಿ ರಷ್ಯನರಿಗೆ ದೊರಕದಿರುವುದೂ ಕೆಲವೆಡೆ ವಿಷಾದದ ಉದ್ಗಾರಕ್ಕೆ ಎಡೆ ಕೊಟ್ಟಿದೆ. ಬ್ರಿಟನಿನ ಹಲವು ಹಿರಿಯ ಸೇನಾಧಿಕಾರಿಗಳ ಅನುಮತವನ್ನು ಎತ್ತಿ ಹೇಳುವುದಾದರೆ, ಈಗಲೀಗ ರಷ್ಯದ ಸಹಾಯಕ್ಕೆ ಮುಖ್ಯವಾಗಿ ಧಾವಿಸುತ್ತಿರುವವರು ಜನರಲ್ ಮಡ್ (ಕೆಸರು) ಅವರು ಮತ್ತು ಸರ್ ವಿಂಟರರು (ಚಳಿಗಾಲ).

• ರಷ್ಯವು ಇಡೀ ಜಗತ್ತಿನ ಸ್ವಾತಂತ್ರ್ಯ ಸಂಗ್ರಾಮವನ್ನು ನಡೆಸುತ್ತಿದೆ. ಫ್ಯಾಸಿ ಸಮ್ಮಿನ ಕರಾಳ ಶಕ್ತಿಯನ್ನು ಅದು ಇದಿರಿಸುತ್ತಿದೆ. ಅದಕ್ಕೆ ಅಖಿಲ ಜಗತ್ತಿನ ಸಹಾನುಭೂತಿ ಇದೆ.

ನಾಲ್ಕು ಪ್ರಧಾನ ಕೇಂದ್ರಗಳಾಗಿ

ಮೋಸ್ಕೋ, ಲೆನಿನ್‌ಗ್ರೇಡ್, ಕೀವ್ ಮತ್ತು ಒಡೆಸ್ಸಾಗಳನ್ನು ಯುದ್ಧತಂತ್ರಜ್ಞರು ಪರಿಗಣಿಸಿದ್ದಾರೆ. ಈ ಪ್ರಮುಖ ಸ್ಥಳಗಳನ್ನು ಸ್ವಾಧೀನಕ್ಕೆ ತಂದುಕೊಂಡೆಪೆ, ರಷ್ಯದ ಯುದ್ಧವನ್ನು ವಿಜಯಪ್ರದವಾಗಿ ಕೊನೆಗಾಣಿಸಿದಂತೆ ಆಗುವುದೆಂದು, ಜರ್ಮನ್ ಯುದ್ಧ ನಾಯಕರೂ ಖಚಿತಾಭಿಪ್ರಾಯ ಏದಿದ್ದಾರೆ. ಇಂತಹ ಅನುಮತದ ಯುಕ್ತಾಯುಕ್ತತೆಯನ್ನು ಈ ಕೆಳಗೆ ಮಾಡಲಾಗಿದೆ.

ಮುಖ್ಯ ಪಟ್ಟಣ ಮೋಸ್ಕೋ!

ಮೋಸ್ಕೋ ರಷ್ಯದ ಮುಖ್ಯ ಪಟ್ಟಣವಷ್ಟೇ ಅಲ್ಲದೆ, ಆ ವಿಶಾಲ ರಾಷ್ಟ್ರದ ಹೃದಯದಂತಿದ್ದು, ಆಡಳಿತೆಯ, ದೈಲ್ಪೆಗಳ ಮತ್ತು ರಷ್ಯದ ತತ್ತ್ವದ ಮೂಲ ನಗರವಾಗಿದೆ. ಹಲವು ಜಾರ್ ರಾಜವಂಶೀಯರ ವಸತಿಸ್ಥಾನವಾಗಿದ್ದ 'ಕ್ರೆಮ್ಲಿನ್' ಕಟ್ಟಡವು, ಮೋಸ್ಕೋದಲ್ಲೇ ಇದೆ. ಹೊಸ ರಷ್ಯದ ಅಧ್ಯಕ್ಷನಾದ ಸ್ಟಾಲಿನಾದರೂ ವಾಸವಾಗಿರುವುದು ಈ ಭವನದಲ್ಲೇ. ಆದುದರಿಂದ ಮೋಸ್ಕೋವನ್ನು ತನ್ನ ಪ್ರಥಮ ಗುರಿಯಾಗಿ, ಹಿಟ್ಲರ್ ಇಟ್ಟುಕೊಂಡುದರಲ್ಲಿ ಆಶ್ಚರ್ಯ ತೋರುವುದಿಲ್ಲ.

ಲೆನಿನ್‌ಗ್ರೇಡ್ ವಿಭಾಗದಲ್ಲಿಯೂ, ಯುಕ್ರೇನಿನಲ್ಲಿಯೂ ಹಿಟ್ಲರ್ ಮುಂದುವರಿದಿರುವನಾದರೂ, ಮಧ್ಯರಂಗದಲ್ಲಿ ವೂರ್ಶಲ್ ಟಿಮೊಶೆಂಕೋರವರ ಆಘಾತಗಳನ್ನು ಸಹಿಸಿಕೊಂಡು, ಜರ್ಮನರು ಹಿಮ್ಮೆಟ್ಟುತ್ತಲಿದ್ದಾರೆ. ಮೋಸ್ಕೋವಿನ ಹಾದಿಯಲ್ಲಿ ಜರ್ಮನರಿಗೆ ಈ ರೀತಿ ಅಪಜಯಗಳಾಗುತ್ತಿರುವುದರಿಂದಲೇ, ರಷ್ಯದ ಪ್ರಧಾನ ನಗರಕ್ಕೆ ಹೆಚ್ಚಿನ ಅಪಾಯವಿಲ್ಲವೆನ್ನುವುದು. 'ಬ್ಲೀಕ್'

(೧೩ನೇ ಪುಟಕ್ಕೆ ಮುಂದರಿಸಿಯದೆ)

ಕೆನ್ಯಾದಲ್ಲಿ ದಕ್ಷಿಣ ಆಫ್ರಿಕದ ಸೇನೆಗಳು!

ಒಂದು ಕಡೆಯಿಂದ ಇನ್ನೊಂದು ಕಡೆಗೆ ಭರದಿಂದ ಸಾಗುವ, ಸೈನಿಕರನ್ನು ಹೊತ್ತು ತರಲುಳ್ಳ ದಕ್ಷಿಣ ಆಫ್ರಿಕ ಸೇನೆಗಳ ದೊಡ್ಡದೊಂಡು ಮೈಗಾವಲಿನ ಭಾಗವಿದು, ಕೆನ್ಯಾ ಗಡಿಗಳ ಬಳಿಯ ಮುಂಭಾಗದ ಒಂದು ಸ್ಥಾನದಲ್ಲಿ "ಇನ್ಸ್‌ಪೆಕ್ಶನಿಗಾಗಿ" ಸಾಲುಕಟ್ಟಿ ನಿಂತದ್ದನ್ನು ಇಲ್ಲಿ ಕಾಣಬಹುದು.

To meet WAR TIME orders FIXED DEPOSITS IN CASH

repayable after 3, 6, 9, 12 & 24 months

at 4, 4½, 5, 6 & 7½% interest respectively (interest paid quarterly) are accepted by

CALICUT HOSIERIES, LTD.,

(ESTD. 1936) CHALAPURAM POST. (Malabar.)

List will remain open only for one month and will close immediately the required amount of Deposits are received.

Apply with 0—2—0 postage stamps for rules and application form at once to Managing Agents.

N. B. Special Rates for Deposits for sums over Rs. 5000/-

THE INSURANCE PRESS ON THE "POPULAR"

"The Popular Insurance Company has grown from very small beginnings into a sound and well organised life office, and has done so by means of carefully selecting its business, judicious expansion and a cautious policy... From the angle of financial strength and invulnerability it can well take its stand among companies of a longer standing... The "Popular has succeeded in occupying an obtrusive but secure position in the domain of insurance. Its steady growth is symbolic of the management's continuity of purpose ..."

Insurance Herald (9-8-1941)

THESE ENCOURAGING REVIEWS WILL MAKE YOU PROUD OF THE "POPULAR". IT IS A LIFE OFFICE OF YOUR OWN — ITS ALL INDIA PROGRESS IS CERTAINLY A COMPLIMENT TO EVERY KANARITE.

"As we have stated on more than one occasion in the past, the "Popular" has been making progress on really sound lines and we shall be happy to see it progressing more and more in the years to come"

Indian Insurance Journal (Sept. 41)

"This young Life Office of Mangalore seems to possess that vigour and energy which is necessary for purpose of achieving all round success The achievment of the "Popular" in the eleventh year of its birth is an indication how an indigenous concern, if carried on sound lines with efficient management, can stand out with granite strength even at an early stage. That steady popularity it is gaining and the growing patronage it is receiving at the hands of the public is amply proved by the continued and splendid progress of the Company from year to year"

Insurance & Finance (1-8-41)

THE POPULAR INSURANCE COMPANY LIMITED,
MANGALORE.

Pandit Bank,
MANGALORE.

ಪಂಡಿತ್ ಬೇಂಕ್,
ಕೋರ್ಟು ರಸ್ತೆ, ಮಂಗಳೂರು.

ಕರೆಂಟ್, ಸೇವಿಂಗ್ಸ್ ಬ್ಯಾಂಕ್, ವ ಕಾಯಂ ಠೇವಣಾತಿ ಯಾನೆ ಡಿಪೊಜಿಟ್‌ಗಳನ್ನು ಪಡಕೊಳ್ಳುವದೂ, ಚಿನ್ನಾಭರಣ ವಗೈರೆಗಳ ಈಡಿನ ಮೇಲೆ ಹಣ ಎಡ್ವಾನ್ಸ್ ಮಾಡುವದೂ, ಸೇಫ್ ಡಿಪೊಜಿಟ್ ಪಡೆಯುವದೂ ವಗೈರೆ ಯಾವತ್ತೂ ಬ್ಯಾಂಕಿಂಗ್ ಕೆಲಸಗಳನ್ನು ಬಹಳ ಸುಲಭವಾದ ಬಡ್ಡಿ ವ ಶರತಗಳೊಡನೆ ಮಾಡೋಣಾಗುತ್ತದೆ.

ಈ ಬ್ಯಾಂಕ್ ಲಿಮಿಟೆಡ್ ಲಾಯ್ಬೆಲಿಟಿ ಯದು ಆಲ್ಲವಾದುದರಿಂದ ಡಿಪೊಜಿಟರಿಗೆ ಹೆಚ್ಚಿನ ಭದ್ರತೆ ಉಂಟು.

ಚಿನ್ನಾಭರಣಗಳ ಈಡಿನ ಮೇಲೆ ಈ ಕೆಳಗಿನ ಬಡ್ಡಿ ದರಗಳಲ್ಲಿ ಹಣ ಎಡ್ವಾನ್ಸ್ ಮಾಡೋಣಾಗುತ್ತದೆ.

ರೂ. 50ರ ತನಕ ಸೇ. 8%
ರೂ. 51ರಿಂದ ರೂ. 500ರ ತನಕ ಸೇ. 7%
ರೂ. 501ರಿಂದ ಮೇಲ್ಪಟ್ಟು ಸೇ. 6½%
ಬಡ್ಡಿ ದರವನ್ನು ಈ ತಿಂಗಳ ಮೊದಲ್ಗೊಂಡು ತಬ್ದಿಲು ಮಾಡಿದೆ.—

ಚಾಲ್ತಿ ಠೇವಣಾತಿ:
ಪ್ರತಿದಿನದ ಶಿಲ್ಕಿನ ಮೇಲೆ ಸೇ. 1 %
ಸೇವಿಂಗ್ಸ್ ಬ್ಯಾಂಕ್: ಸೇ. 3 %

ನಿರಖು ಠೇವಣಾತಿ:
6 ತಿಂಗಳುಗಳಿಗೆ ಸೇ. 3½ %
1 ವರ್ಷಕ್ಕೆ ಸೇ. 4 %

PANDIT SHIVA RAO, B.A., LL.B.
PROPRIETOR.
PANDIT SANJIVA RAO, B.A.
AGENT.

JAYA LAXMI BANK, LTD., MANGALORE.
ಜಯಲಕ್ಷ್ಮೀ ಬೇಂಕ್, ಲಿಮಿಟೆಡ್, ಮಂಗಳೂರು.

(ಸ್ಥಾಪಿಸಲ್ಪಟ್ಟದ್ದು—1923)

ಶಾಖೆಗಳು: ಪುತ್ತೂರು, ಕಾಸರಗೋಡು, ಚಿಕ್ಕಮಗಳೂರು, ಮೂಡಿಗೆರೆ, ಕಣ್ಣಾನೂರು, ಕಲ್ಲಿಕೋಟೆ, ಕುಂಡೊಟ್ಟು, ಮಾಲಾಪ್ಪುರಂ ಮತ್ತು ಮಂಗಳೂರು.

ಅಧಿಕೃತ ಮೂಲಧನ . . .	ರೂ. 5,00,000
ಅರ್ಪಿಸಲಾದ ಮೂಲಧನ . . .	ರೂ. 2,50,000
ಚೆಂದಾಹಾಕಿದ ಮೂಲಧನ . .	ರೂ. 1,27,000
ತೆತ್ತ ಮೂಲಧನ . . .	ರೂ. 1,17,000
ಕ್ಷೇಮ ಮತ್ತಿತರ ನಿಧಿಗಳು . .	ರೂ. 1,20,753

ಕಾಯಂ ಠೇವಣಾತಿಗಳು.

3 ತಿಂಗಳ ಠೇವಣಾತಿಗಳಿಗೆ–ಸೇ.3%; 6 ತಿಂಗಳ ಠೇವಣಾತಿಗಳಿಗೆ–ಸೇ.3½%;
12 ತಿಂಗಳ ಠೇವಣಾತಿಗಳಿಗೆ—4%.

ಮಾಸಿಕ, ಸೇವಿಂಗ್ಸ್ ಬೇಂಕ್, ಮತ್ತು ಚಾಲ್ತಿ ಠೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲಾಗುವುವು. ಮುಖ್ಯವಾಗಿ ಬಂಗಾರ, ಸರಕು ಈಡಿನ ಮೇಲೆ, ಸಾಲವನ್ನು ಕೊಡುವುದು.

M. Ganesh Rao,
ಸೆಕ್ರೆಟರಿ.

ಶಾಸ್ತ್ರೀಯ ಅಮೂಲ್ಯ ಔಷಧಗಳು

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟುದು. ಅಭ್ಯಂಗಕ್ಕೆ ಆಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 6 ಔನ್ಸಿನ ಬಾಟ್ಲಿಗೆ ರೂಪ್ಯೆ 1—2—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರ ವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿಯಾಗಿದೆ. ಪೌಂಡು ೧ಕ್ಕೆ ರೂ. 3—0—0. ಅಂಚೆವೆಚ್ಚ ಬೇರೆ.

ಕಸ್ತೂರಿಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ.

ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾದ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು. ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ಶ್ರೀ ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

(ರಿಜಿಸ್ಟರ್ಡ್)

ಬಾಲಾರ್ಕಮಧು

ಲಕ್ಷಗಟ್ಟಲೆ ಮಕ್ಕಳ ಪ್ರಾಣವನ್ನು ಕಾಪಾಡಿದೆ.

ಮಕ್ಕಳ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಗ್ರಹಣಿ; ಅಸ್ತಿಜ್ವರವನ್ನು ಹೋಗಲಾಡಿಸುವುದು. ಗೂಡು ಕಟ್ಟಿಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಮಧುರವಿದೆ.

ಬೆಲೆ: 0-12-0, ಟ. ಖ. 0-9-0.

ಎಲ್ಲಾ ಕಡೆಗಳಲ್ಲಿಯೂ ಏಜಂಟರು ಬೇಕಾಗಿದ್ದಾರೆ

ಧಾರಾಳ ಕಮಿಶನ್ ಕೊಡಲ್ಪಡುವುದು. ಬರೆಯಿರಿ:—

ಯಂ. ವಿ. ಪ್ರಸಾದಿಕ ಔಷಧಾಲಯ,
ಶಿವಮೊಗ್ಗಾ. (ಮೈಸೂರು ಸೀಮೆ)

ಡಾಕ್ಟರ್ ಜಿ. ಬಿ. ಇವರ

ಸುಗಂಧ ನಸ್ಯದ ಪುಡಿ
?

ನೀವು ಯಾರು? ಉಪಾಧ್ಯಾಯರೆ? ವರ್ತಕರೆ? ಆರಂಬಗಾರರೆ? ಅಥವಾ ಚದುರಂಗ ಆಡುವವರೆ? ನೀವು ಯಾರಾದರೂ ಸರಿ–ನಿಮಗೆ ಬೇಸರಿಕೆಯುಂಟಾಗಿ, ಕಲಸದಲ್ಲಿ ಆಸಕ್ತಿ ತಪ್ಪಿದಾಗ, ಡಾಕ್ಟರ್ ಜಿ. ಬಿ. ಇವರ ಸುಗಂಧ ನಸ್ಯದ ಪುಡಿಯನ್ನು ಉಪಯೋಗಿಸಿ. ಆಗ ನಿಮ್ಮಲ್ಲಿ ನವಚೇತನವುಂಟಾಗಿ, ಉತ್ಸಾಹವೂ ಸ್ಫೂರ್ತಿಯೂ ತೋರಿ ಬರುವುದು. **ಬೆಲೆ: ಬುಡ್ಡಿ ಒಂದಕ್ಕೆ ನಾಲ್ಕಾಣೆ** ಟಪ್ಪಾಲು ಖರ್ಚು ಪ್ರತ್ಯೇಕ.)

ಗುರುಬಸವ ಅಂಡ್ ಕಂಪೆನಿ, ಲಿಮಿಟೆಡ್,
ಪೋಸ್ಟು ಬಾಕ್ಸು ನಂಬರು ೫೧೦, ಪಾರ್ಕು ಟೌನ್, ಮದರಾಸು.

ಇಟೆಲಿಯಲ್ಲಿ ಫ್ಯಾಸಿಸಮ್ಮಿನ ಜನ್ಮದಾತಾರರು

ಕೆಲವು ವ್ಯಕ್ತಿಗಳು ಮತ್ತು ಅವರ ಪರಿಚಯ!

ಇಟೆಲಿಯಲ್ಲಿ ಫ್ಯಾಸಿಸ್ಟ್ ಚಳವಳಿಕ್ಕೆ ಮೂಲಕಾರಣರಾದ ಮುಸೋಲಿನಿಯ ಮಿತ್ರರಲ್ಲಿ ಬಹು ಮಂದಿ ಈಗಲೂ ಜೀವಂತರಾಗಿದ್ದಾರೆ. ಎಂದೊಡನೆ ರಾಷ್ಟ್ರದ ರಾಜ್ಯಭಾರಕಾರ್ಯದಲ್ಲಿ ಅವರೆಲ್ಲರ ಪ್ರಭಾವ ಈಗಲೂ ಬೀಳುತ್ತಿದೆಯೆಂದಲ್ಲ. ಆ ಕಾಲ ಕಳೆದುಹೋಯಿತು. ಈಗ ಮುಸೋಲಿನಿಯೊಬ್ಬನೇ ಸರ್ವಾಧಿಕಾರಿಯಾಗಿ, "ಫ್ಯಾಸಿಸ್ಟ್ ಗ್ರ್ಯಾಂಡ್ ಕೌನ್ಸಿಲಿನ" ಮತ್ತು ಪಕ್ಷದ ನಾಯಕನಾಗಿ, ಸ್ವದೇಶಮಂತ್ರಿ—ಯುದ್ಧಮಂತ್ರಿ—ಜಲವಾಯು ಖಾತೆಗಳ ಸೈನ್ಯಾಧಿಕಾರಿಯಾಗಿ—ಆಫ್ರಿಕದಲ್ಲಿರುವ ಇಟೆಲಿಯ ವಸಾಹತುಗಳ ಮೇಲಧಿಕಾರಿಯೂ ಈ ಎಲ್ಲವೂ ಅವನೇ ಆಗಿ, ಇಟೆಲಿಯನ್ನು ಆಳುತ್ತಿದ್ದಾನೆ. ಗ್ರೀಸಿನ ಮೇಲಿನ ಅಭಿಯೋಗದ ಸಮಯದಲ್ಲಿ ಸೇನಾಧಿಕಾರಿಗಳು ಆಗಾಗ್ಗೆ ಬದಲಾಗುತ್ತಿದ್ದುದನ್ನು ಕಾಣುವಾಗ, ಪ್ರತಿಯೊಬ್ಬನ ಕುರಿತೂ ಮುಸೋಲಿನಿಗೆ ಅವಿಶ್ವಾಸ ಉತ್ಪನ್ನವಾಗಿರುವಂತೆ ತೋರುತ್ತಿದೆ.

ಅವನ ಅಳಿಯ

ಕೌಂಟ್ ಗಾಲಸ್ಸ್ಸೋ ಸಿಯಾನೋ ಈಗ ವಿದೇಶಾಂಗ ಮಂತ್ರಿ. ಪ್ರಾಯವಿನ್ನೂ ನಲ್ವತ್ತನ್ನು ದಾಟಿಲ್ಲ. ಒರಟು ಪ್ರಕೃತಿಯ ಮನುಷ್ಯ. ಸದಾ ಮುಗುಳ್ನಗುತ್ತಲೇ ಇರಬೇಕು. ಆದರೆ ಹಿಡಿದ ಕೆಲಸವನ್ನು ಸಾಧಿಸದೆ ಇರಲಾರೆನೆಂಬ ಧೃಡನಿಶ್ಚಯ ಅವನಲ್ಲಿ ಇದ್ದೇ ಇದೆ.

ಅಬಿಸೀನಿಯಾ ಯುದ್ಧಕ್ಕೆ ಮುಂಚಿತವಾಗಿ ಸಿಯಾನೋ ಪ್ರಚಾರಕಾರ್ಯ ಮಂತ್ರಿಯಾಗಿದ್ದ. ಆಗ ತನ್ನ ಹಿರಿಮೆಯನ್ನು ತೋರಿಸುವುದಕ್ಕೆ ಅಸ್ಪದ ದೊರಕಿರಲಿಲ್ಲ. ಆದರೆ ಅಬಿಸೀನಿಯಾ ಯುದ್ಧದಲ್ಲಿ ಎಮಾನಪಡೆಯೊಂದರ ನಾಯಕನಾಗಿ, ಸಿಯಾನೋ ನಡೆಸಿದ ಕಾರ್ಯಾಚರಣೆ ಬಹಳ ಪ್ರಸಿದ್ಧಿಗೆ ಬಂದಿದೆ. ಪ್ರತಿದಿನವೂ ಇಟೆಲಿಯ ಅಗಿನ ಪತ್ರಿಕೆಗಳ ಮುಂದಿನ ಪುಟದಲ್ಲಿ ತನ್ನ ಅಳಿಯನ ಭಾವಚಿತ್ರವನ್ನು ಕಂಡು ಮುಸೋಲಿನಿ ಬೇಸತ್ತು ಹೋದನಂತೆ.

ಅಪ್ರತಿಮ ನಾಜೀವಾದಿ

ಇವನ ಪತ್ನಿ ಎಡ್ಡಾ ಹೇಗೆಯೋ ಹಾಗೆಯೇ ಇವನೂ ನಾಜೀವಾದಿಯೇ. ಮುಸೋಲಿನಿ ಹಿಟ್ಲರನನ್ನು ಪ್ರೀತಿಸುವುದಕ್ಕೆ ಇನ್ನೂ ತೊಡಗದೇ ಇರುವಾಗಲೇ,—ಆಸ್ಟ್ರಿಯದ ಶೂಷ್ನಿಗ್ಗರನ್ನು ಹಿಟ್ಲರನಿಂದ ತಾನು ರಕ್ಷಿಸುವುದಾಗಿ ವಚನ ಎತ್ತಿದ್ದಾಗಲೇ,—ಸಿಯಾನೋ ಹಿಟ್ಲರನ್ನು ಆರಾಧಿಸತೊಡಗಿದ್ದ. ಈ ಸಕ್ತಿಶಕ್ತಿಗಳ ಒಂದುಗೂಡುವಿಕೆಗೆ ಮೂಲಕಾರಣನೇ ಅವನು.

೧೯೩೬ರಲ್ಲಿ ವಿದೇಶಾಂಗ ಮಂತ್ರಿಯಾಗಿ ನಿಯಮಿತನಾದ ನಾಲ್ಕೇ ತಿಂಗಳುಗಳಲ್ಲಿ ಸಿಯಾನೋ ಬ್ರಿಜಸ್ ಗ್ಗಾಡನಿಗೆ ಧಾವಿಸಿದ. ಅಲ್ಲಿ ಜರ್ಮನಿ ಇಟೆಲಿಗಳೆರಡೂ ಒಂದಾಗಿ ಸಾಗಬೇಕೆಂದು ವಿಧಿಯ ಸಂಕಲ್ಪವೆಂಬುದನ್ನು ತನ್ನ ಆರಾಧ್ಯ ಮೂರ್ತಿಗೆ ಸೂಚಿಸಿದ.

ಫ್ರೆಂಚ್ ಮಾತನಾಡುವುದಕ್ಕೂ ಇಚ್ಛಿಸುವುದಿಲ್ಲ

ಫ್ರೆಂಚರನ್ನು ಸಿಯಾನೋ ಮನಸಾರೆ ದ್ವೇಷಿಸುತ್ತಾನೆ. ತನ್ನ ರಾಜಕಾರಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಎಷ್ಟರ ಮಟ್ಟಿಗೆ ಸಾಧ್ಯವೋ, ಆ ತನಕವೆಲ್ಲ ಫ್ರೆಂಚ್ ಭಾಷೆಯನ್ನೂ ಮಾತನಾಡುವುದಿಲ್ಲ. "ಸೇವೋಯಿ, ಕೋರ್ಸಿಕಾ, ಟೂನಿಸ್, ಜಿಬೂಟಿಗಳು ನಮ್ಮವು," ಎಂದು ಫ್ರೆಂಚರಿಗಿದಿರಾಗಿ ಪ್ರದರ್ಶನಗಳನ್ನೇರ್ಪಡಿಸಿದವನೂ ಇವನೇ. ೧೯೩೮ರಲ್ಲಿ ಫ್ಯಾಸಿಸ್ಟ್ ಗ್ರ್ಯಾಂಡ್ ಕೌನ್ಸಿಲಿನ ಮುಂದುಗಡೆ, ಯುದ್ಧಹೂಡಲು ಬೇಕಾದ ಯೋಜನೆಯನ್ನು ಕೂಡಾ, ಈತ ಮುಂಡಿಸಿದನಂತೆ. ಆದರೆ ಅದಕ್ಕೆ ಯಾರ ಬೆಂಬಲವೂ ಸಿಗದೆ ಹೋಯಿತು.

ಪ್ರತಿಸ್ಪರ್ಧಿಯಾಗಿದ್ದ ಬಾಲ್ಬೊ

ಮುಸೋಲಿನಿಯನ್ನುಳಿದ ಮೇಲೆ, ಬಾಲ್ಬೊನ ಹೆಸರೇ ಫ್ಯಾಸಿಸ್ಟ್ ಚರಿತ್ರೆಯಲ್ಲಿ ಪ್ರಸಿದ್ಧವಾದುದು. ೧೮೯೬ರಲ್ಲಿ ಈತ ಹುಟ್ಟಿದ. ಇಟೆಲಿಯು ಕಳೆದ ಘೋರ ಯುದ್ಧವನ್ನು ಪ್ರವೇಶಿಸುವಂತೆ ಮಾಡಿದವರಲ್ಲಿ ಇವನೂ ಒಬ್ಬ. ಫ್ಯಾಸಿಸ್ಟಿಗಳು ಅಧಿಕಾರವನ್ನು ಕೆಸಿದುಕೊಂಡಾಗ, ಆ ಚಳವಳಿದಲ್ಲಿ ಬಾಲ್ಬೊ ಅತಿ ಪ್ರಧಾನ ಪಾತ್ರ ವಹಿಸಿದ್ದ.

ರಾಜಕೀಯ ರಂಗದಲ್ಲಿ ತನಗೆದುರಾಗಿ ವರ್ತಿಸುತ್ತಿದ್ದ ಪ್ರತಿಸ್ಪರ್ಧಿಗಳಿಗೆ ಬಾಲ್ಬೊ ಹರಳೆಣ್ಣೆ ಕುಡಿಸುತ್ತಿದ್ದನೆಂದು ಪ್ರತೀತಿಯಿದೆ.

ಜರ್ಮರ್ಕ್ಸ್

"ನಮ್ಮ ಶಾಲಾ ಮಕ್ಕಳಿಗೆ ಅತ್ಯಂತ ಪ್ರಯೋಜನಕಾರಿಯೆಂದು ನನಗೆ ಕಂಡು ಬಂದಿದೆ" ಎಂದು ವಡಮಲಪುರಮ್‌ನ ಮಿಸ್ ಬಿ. ಎಂ. ಸ್ಟೈಟ್‌ಲೇಯವರು ಬರೆಯುತ್ತಾರೆ.

ಜರ್ಮರ್ಕ್ಸ್

ಕ್ರಿಮಿಗಳನ್ನು ನಾಶಪಡಿಸುತ್ತದೆ ಮತ್ತು ಗಾಯಗಳನ್ನು ಗುಣಪಡಿಸುತ್ತದೆ.

ಲಿಟ್ಲ್ಸ್‌ರ ಓರಿಯಂಟಲ್ ಬಾಂ ತಯಾರಿ

ರೋಮಿನ ಜೈತ್ರಯಾತ್ರೆಯು ವಿಜಯಪ್ರದವಾಗಿ ಕೊನೆಗಾಣುವುದಕ್ಕೆ ಬಾಲ್ಬೊ ಒಬ್ಬನೇ ಕಾರಣನೆಂದು ತಿಳಿದು ಬಂದಿದೆ. ೧೯೨೨ರ ಬಳಿಕ, ಬಾಲ್ಬೊ ವಿಮಾನ ಮಂತ್ರಿಯಾಗಿ ಹಲವು ಹಾರಾಟಗಳನ್ನು ಮಾಡಿ, ಮುಸೋಲಿನಿಯಿಂದ ಮಾರ್ಶಲ್ ಬಿರುದನ್ನು ಗಳಿಸಿಕೊಂಡ.

ಈತ ಹಿಟ್ಲರ್ ಪ್ರಿಯನೂ ಸಮತಾವಾದಿಗಳ ಕಡುವೈರಿಯೂ ಆಗಿದ್ದ.

ಯುದ್ಧಾರಂಭದಲ್ಲಿ ವಿಮಾನಕ್ಕೆ ಬೆಂಕಿ ತಗಲಿದುದರ ದೆಸೆಯಿಂದಾಗಿ ಬಾಲ್ಬೊ ಮರಣಪಟ್ಟ. ಈ ದುರಂತಕ್ಕೂ ಮುಸೋಲಿನಿಗೂ ಸಂಬಂಧ ಕಲ್ಪಿಸಿದವರೂ ಇದ್ದಾರೆ.

(ಈನೇ ಪುಟಕ್ಕೆ ಮುಂದರಿಸಿಯದೆ)

ದೀರ್ಘಕಾಲದ ಕೆಮ್ಮು, ನೆಗಡಿ, ಥಂಡಿಗಳು ಕ್ಷಿಪ್ರ ವಾಸಿಯಾದುವು.



ಉದ್ರೇಕಿಸುವ ಕೆಮ್ಮುಗಳು ನಿಮ್ಮ ಗಂಟಲೊಡೆದು ನೋವನ್ನುಂಟು ಮಾಡುವುವು. ಕೆಮ್ಮುವುದರಿಂದ ಮೃದುವಾದ ಶ್ವಾಸನಾಳಗಳು ಬಾತುಕೊಳ್ಳುವುವು; ಮತ್ತು ಇದುಕಾರಣ ಕಠಿಣ ಪ್ರಸಂಗಗಳು ಬರಬಹುದು, ಆದುದರಿಂದ ಪೆಪ್ಸ್ ವಿಷಹಾರಕ ಶ್ವಾಸನೀಯ ಬಿಲ್ಲೆಗಳನ್ನು ಸೇವಿಸಿ.

ಪೆಪ್ಸ್ ನಿಮ್ಮ ಬಾಯಲ್ಲಿ ಕರಗಿ ಬಿಡುವಂಥಾ ಸಮೃದ್ಧ ಔಷಧೀಯ ಸಾರಗಳು ನಿಮ್ಮ ಶ್ವಾಸದೊಂದಿಗೆ ಸೇರಿ ಪುಪ್ಪುಸಗಳ ಒಳಗೆ ಆಳಕ್ಕೆ ಸೇರಿಕೊಳ್ಳುತ್ತವೆ. ಇದರಿಂದಾಗಿ, ಸಾಂಕ್ರಾಮಿಕ ಕ್ರಿಮಿಗಳು ನಾಶಹೊಂದುತ್ತವೆ. ಹಾಗೂ ಗಂಟಲುಬೇನೆ ನಿವಾರಿಸಿ ಎದೆಯ ಬಿಗುವನ್ನು ಪಶಮನಗೊಳಿಸಿ ಕಠಿಣ ಕೆಮ್ಮು ಮತ್ತು ನೆಗಡಿಯನ್ನು ನಿಲ್ಲಿಸುತ್ತದೆ.



ಎಲ್ಲಾ ಔಷಧಿ ವ್ಯಾಪಾರಿಗಳು ಪೆಪ್ಸ್‌ನ್ನು 1 ರೂಪಾಯಿಯಂತೆ ಬಿಕರಿಮಾಡುತ್ತಾರೆ.

ಏಜೆಂಟರು:— ಮೆಸರ್ಸ್ ದಾಧಾ ಎಂಡ್ ಕೊ., ಟೌನ್, ಮದ್ರಾಸು.

ಪೆಪ್ಸ್ ಸೇವಿಸಿ

PEPS

ವಿಷಹಾರಕ ಶ್ವಾಸನೀಯ ಬಿಲ್ಲೆಗಳು.

ಬ್ರಿಟಿಸಿನ ನೌಕೆಗೆ ನೆರವಾದ ಮಹಿಳೆಯರು.

ಮಹಿಳೆಯರ ರಾಯಲ್ ನೌಕಾ ಸರ್ವೀಸುಗಳವರು ಬ್ರಿಟಿಸಿನ ನೌಕೆಗೆ ನಾನಾ ಬಗೆಯ ಸಹಾಯ ನೀಡುತ್ತಿದ್ದಾರೆ. ಈ ಹುಡುಗಿಯರು ಸಾಮಗ್ರಿಗಳನ್ನು ಸಾಗಿಸುತ್ತಾರೆ; ಅಡಿಗೆ ಮಾಡುತ್ತಾರೆ; ಕಾರ್ಯದರ್ಶಿ ಇತ್ಯಾದಿ ಕಾರ್ಯ ನಿರ್ವಹಿಸುತ್ತಾರೆ; ಹಾಗೆ ಗಂಡಸರು ಕಷ್ಟತರವಾದ ಕರ್ತವ್ಯಗಳನ್ನು ತಡೆಬಿಡುವಿಲ್ಲದೆ ಪೂರೈಸುವಂತೆ ನೆರವಾಗುತ್ತಿದ್ದಾರೆ. ಈ ಚಿತ್ರವು "ರೆನ್" ವಾಹಕಳೊಬ್ಬಳು ಸವಾರಿ ಮಾಡುತ್ತಿರುವುದಾಗಿದೆ.

ಈ ವಾರದ ಕಥೆ

ಅಂತರ - ಪಟ

ಲೇಖಕ—ಶ್ರೀ। ರಾ. ಕೃ. ಶೆಟ್ಟಿ

೧

ರಾಮು ಬಂದಿದ್ದಾನೆಂದು ಸರಲನ ಹೃದಯವು ನರ್ತಿಸತೊಡಗಿತು. "ನಮ ಗಿಬ್ಬರಿಗೂ ಮಾತಿಲ್ಲದಿದ್ದರೂ, ಸರಿಯೆ- ಒಮ್ಮೆ ಆಚೆಗೆ ಈಚೆಗೆ ನಡೆದು ಹೋಗು ವಾಗ, ಆತನ ಚೆಲುವನ್ನು ನೋಡಿ ಆನಂ ದಪಡಬಹುದಷ್ಟೆ! ಅಂದರೆ ನಸ್ಸೆದೆ ತುಂಬು ವುದು" ಎಂದು ಅವಳ ಅಂತರಂಗ.

ರಾಮು ಬಂದಿದ್ದಾನೆ,—ಅಹುದು· ಆದರೆ ಅವನು ಹೆಚ್ಚಾಗಿ ಮನೆಯಲ್ಲಿರು ತ್ತಿದ್ದಿಲ್ಲ, ಅವನು ಓದುತ್ತಿರುವಾಗ ಸಾಲೆಯ ಗೆಳೆಯರು ಅವನಿಗೆ ಹಲವರು,— ಮಂಗಳೂರಿನಲ್ಲಿ ಅವರನ್ನು ನೋಡಿಬರು ವುದು, ಅವರೊಂದಿಗೆ ಮಾತು ಬಳೆಸಿ ಹೊತ್ತು ಕಳೆಯುವುದು ಅವನ ಸ್ವಭಾವ; ಅಭ್ಯಾಸ. ಸರಲನಿಗೆ ಅದು ಸರಿಬೀಳು ತ್ತಿರಲಿಲ್ಲ; ತನ್ನೆದುರಿಗೆ ಪೇಪರು ಹಿಡಿದು ಕೊಂಡು,—ಓದದಿದ್ದರೂ ಚಿಂತಿಲ್ಲ—ಒಂದು ಗಳಿಗೆ ಹೊತ್ತಾದರೂ ರಾಮು ಕೂತಿರಬಾರದೇ? ಎಂದು ಆಕೆಯ ಹಂ ಬಲ. ಆದರೆ, ಸದ್ಯ ಅವರಿಬ್ಬರಿಗೂ ಮಾತಿ ರುತ್ತಿದ್ದರೆ ಈ ಕಷ್ಟ ತಪ್ಪುತಿತ್ತು. ಆಗ ಹೊರಗಿನ ಮಾತುಕತೆಗಳ ಗೊಡವೆ ಇಲ್ಲದೆ, ಅವನು ಮನೆಯಲ್ಲೇ ಇದ್ದು ಸರಲನೊಂದಿಗೆ ಸರಸವಾಡುತ್ತಿದ್ದ.

ಆಕೆಯ ಮನಸ್ಸು ಹೇಳುತಿತ್ತು: "ನಾನು ಮಾತನಾಡಿದ್ದರೆ ಏನಾಗು ತ್ತಿತ್ತು? ಏನೂ ಆಗುತ್ತಿರಲಿಲ್ಲ! ಅವರು ತಮಾಷೆಗೆಂದು ಹೊಡೆದುದಕ್ಕೆ ನಾನು ಸಿಟ್ಟುಗೊಂಡೆ; ಮಾತಿಲ್ಲದೆ ಕುಳಿತೆ. ಈ ಆರೇಳು ವರುಷಗಳನ್ನೂ ಹಾಗೇ ಮಾತಿ ಲ್ಲದೆ ಕಳೆದಿದ್ದೇನೆ. ಅವರು ಕೂಡ ಹಟ ಹಿಡಿದರು. ದೇವರೇ! ಒಮ್ಮೆ ಅವರ ಮನಸ್ಸನ್ನು ಸಮಾಧಾನಮಾಡು; ನನ್ನ ಮೇಲೆ ಕೋಪ ಇದ್ದರೆ ಕಳೆದು ಬಿಡು."

ಹೀಗಿದ್ದರೂ, ಅವಳು ಅಂದು ಕೊಳ್ಳುತ್ತಿದ್ದಳು: "ಚೀಃ! ಅವರ ಮನಸ್ಸು ಅಷ್ಟು ಕಠಿನವಲ್ಲ. ಅವರು ಮಾತನಾಡು ತ್ತಿದ್ದರು. ನಸ್ನೊಡನೆ ಸ್ನೇಹದಿಂದಿರು ತ್ತಿದ್ದರು. ಮುಖ್ಯ, ನಾನೇ ತಪ್ಪುಗಾ ರಳು" ಎಂದು. ಆದರೆ ಇನ್ನು ಬರುವ ಮಾತು, ಅವರೊಡನೆ ಹೇಗೆ ಮಾತನಾಡ ಬೇಕೆಂದು.

ಸರಲ ಗಟ್ಟಿ ಮನಸ್ಸಿನವಳು. ಇಷ್ಟು ಕಾಲವೂ ಒಂದು ನಲ್ನುಡಿಯನ್ನೂ ಆಡದೆ, ರಾಮುವನ್ನು ತನ್ನ ಹಾರ್ದಿಕ ಸ್ನೇಹಬಂಧನದಲ್ಲಿ ಕಟ್ಟಿಡುತ್ತಿದ್ದಳಾ ದರೂ, ಆತನು ನಿಂತಲ್ಲಿ ನಿಲ್ಲುತ್ತಲೇ ಇರ ಲಿಲ್ಲ. ಅವನು ಆಚೆಗೆ ಬರುವಾಗ, ಸರಲ ಈಚೆ ಸರಿದು ಓಡುತ್ತಿದ್ದಳು. ಹೀಗೆ ಅವ ರಿಬ್ಬರಲ್ಲಿಯೂ ನಡೆದು ಬಂದ ನಡತೆ.

ರಾಮು ಬಂದು, ಇಂದಿಗೆ ಆರು ದಿನವಾಯಿತು. ಸರಲ ಮನಸ್ಸಿನಲ್ಲಿಯೇ ಅಂದುಕೊಂಡಳು: "ಇವತ್ತು ನಾನು ಖಂಡಿತ ಮಾತನಾಡುತ್ತೇನೆ."

"ಆದರೆ ಅವರು ಮಾತನಾಡದೇ ಇದ್ದರೆ?" ಇದಕ್ಕೆ ಸರಿಯಾದ ಉತ್ತರ ಕೊಟ್ಟು, ಸಮಾಧಾನಗೊಳಿಸುವವರು ಅಲ್ಲಿ ಯಾರೂ ಇರಲಿಲ್ಲ. ಕೊನೆಗೆ ಅವಳು ಒಂದೆರಡು ಕಂಬನಿಗರೆದಳು.

ರಾಮು ಕೋಣೆಗೆ ಬರುವಾಗ, ಅವಳು ಅಳುತ್ತಿರುವುದನ್ನು ಕಂಡನು. ಅವನೆದೆ ಕರಗಿತು. ಮಾಡುತ್ತಾನೇನು? ಆಕೆಯ ಮುಖವನ್ನಷ್ಟೆ ಒಂದು ತಡವೆ ಎವೆಯಿಕ್ಕದೆ ನೋಡಿದನು. ಆಕೆ ಮೆಲ್ಲನೆ ಈಚೆಗೆ ಮೋರೆ ತಿರುಗಿಸುವಾಗ, ಎದುರು ರಾಮು ನಿಂತುಕೊಂಡಿದ್ದನು. ಸರಲನಿಗೆ ನಾಚಿಕೆಯಾಯಿತು. ಅವಳು ಸೀರೆಯ ನೆರಿಗೆಯಿಂದ ಕಣ್ಣುಗಳನ್ನೊರಸಿಕೊಂಡು, ರಾಮುವಿನ ಕೋಣೆಯಿಂದ ಹೊರಗೋ ಡಿದಳು. ರಾಮು, ಆಕೆಯು ಹೊರ ಓಡುವಾಗ ಅವಳ ಅಂಗಾಂಗಗಳ ಚೆಲು ವನ್ನು ಕಣ್ದಣಿಯೆ ನೋಡಿದನು. ಅವ ನನ್ನು ಕೇಳದೆ ಹೊರಟಿತು ನಿಟ್ಟುಸಿರೊಂದು!

"ನೀನು ಹೋಗಗೊಡಬಾರದಿತ್ತು" ಎಂದು ಆತನ ಮನಸ್ಸು ಅವನಿಗೆ ಬುದ್ಧಿ ಹೇಳಿತು.

ಹೊರಗೆ ಹೋದ ಸರಲನ ಅವಸ್ಥೆ ಯೂ ಹಾಗೇ ಆಯಿತು. "ನೀನು ತಪ್ಪು ಮಾಡಿದೆ. ನೀನು ಓಡಿಬರುವ ಅಗತ್ಯವೇ ಇರಲಿಲ್ಲ" ಎಂದು ಆಕೆಯ ಮನಸ್ಸು ಹೇಳಿತು.

೨

ರಾಮು, ಮಧ್ಯಾಹ್ನದ ಊಟವಾದ ಮೇಲೆ, ಮಂಚದ ಮೇಲೆ ಹಾಯಾಗಿ ನಿದ್ರಿಸಿದ್ದನು. ಸರಲನ ತಾಯಿ, ನೆರೆ ಮನೆಗೆ ಹೋಗಿದ್ದರು. ಅವಳ ಸಣ್ಣ ತಮ್ಮ ಬಯಲಲ್ಲಿ ಆಟ ನೋಡಲು ಓಡಿ ದ್ದನು. ಸರಲ ಒಬ್ಬಳೇ ತನ್ನ ಕೋಣೆ ಯಲ್ಲಿ ಕುಳಿತ್ತಿದ್ದಳು. ಇನ್ನೂ ರಾಮು ಹೊರಗೆ ಹೋದ ಸುಳುವು ತೋರಲಿಲ್ಲ ವಾಗಿ ಆಕೆ ಮೆಲ್ಲನೆ ಉಪ್ಪರಿಗೆಯನ್ನು ಹತ್ತಿ ರಾಮು ಮಲಗಿದ ಮಂಚದ ಸಮೀಪ ಬಂದಳು.

ಅವನ ಎದೆಯ ಮೇಲೆ "ಜೇಫ್ ಎಂಡ್ ಗ್ರೇನ್" ಪುಸ್ತಕವನ್ನು ಅಡಿ ಮೇಲಾಗಿ ಬಿಡಿಸಿತ್ತು. ಸರಲ ರಾಮು ವಿನ ಮುಖದ ಕಡೆ ಬಗ್ಗಿ ಆತನಿಗೆ ಎಚ್ಚ ರಿದೆಯೊ? ಎಂದು ನೋಡಿದಳು. ಇರ ಲಿಲ್ಲ. ಮನಸ್ಸಿಗೆ ಸ್ವಲ್ಪ ಸಂತೋಷವೂ ಆಯಿತು; ಎದೆ ಹಗುರಾಯಿತು. ಆಕೆ ತಾನೇ ಹಿಗ್ಗಿಕೊಂಡು ಪುಸ್ತಕದ ಕಡೆಗೆ ಕೈಹಾಕಿದಳು.

ಪುಸ್ತಕ ತೆಗೆಯುವ ಹೊತ್ತಿಗೆ ರಾಮು ತಟ್ಟನೆದ್ದು ಕುಳಿತ. ಸರಲ ಬೇಟೆಗೆ ಬಿದ್ದ ಜಿಂಕೆಮರಿಯಂತೆ, ಪೇಚಿ ನಲ್ಲಿ ಬಿದ್ದಳು. ನಾಚಿಕೆಯಿಂದಲೂ. ತಾನು ತಪ್ಪು ಮಾಡಿದೆನೆಂಬ ಅನುಭವ ದಿಂದಲೂ ಅವಳ ಮುಖ ಸಣ್ಣದಾ ಯಿತು. ರಾಮು ಅವಳ ಈ ಮ್ಲಾನ ವದನವನ್ನು ನೋಡಿ, ಬೇಸರಗೊಂಡ; "ಪುಸ್ತಕ ಬೇಕೇ ಸರಲಾ?" ಎಂದ. ಸರಲ ಬೇಕೆಂದೂ ಹೇಳಲಿಲ್ಲ; ಬೇಡವೆಂದು ತಲೆಯಲ್ಲಾಡಿಸಿದ್ದೂ ಇಲ್ಲ. ಅಷ್ಟೇಕೆ? ಕಣ್ಣೂ ಬಿಟ್ಟು ರಾಮುವಿನ ಮುಖ ಕೂಡ ನೋಡಿರಲಿಲ್ಲ! ಅವಳು ಓಡಿ ಹೋದಳು. ತನ್ನ ಕೋಣೆಯಲ್ಲಿ ಬಾಗಿಲು ಹಾಕಿ ತಾನೊಬ್ಬಳೇ ಕುಳಿತು ಏಕೋ ರೋದಿಸ ಹತ್ತಿದ್ದಳು. ಏಕೆ ಅಳುತ್ತಿದ್ದೇನೆ ಎಂಬ ಅರಿವು ಆಕೆಗಿರಲಿಲ್ಲ.

೩

ರಾಮು ಎರಡು ದಿನಗಳ ಮೇಲೆ, ಕಾಸರಗೋಡಿಗೆ ಹೊರಟ. ಸಾಮಾನು ಗಳನ್ನೆಲ್ಲ ಗಾಡಿಯಲ್ಲಿ ಹೇರಿಸಿ, ಅತ್ತೆ ಮಾವಂದಿರಿಗೆ ವಂದಿಸಿ "ನಾನು ಬರು ತ್ತೇನೆ" ಎಂದು ಹೇಳುವಾಗ, ಅಲ್ಲಿಯೇ ಸರಲ ನಿಂತಿದ್ದಳು, ಅವಳ ಮಿಂಚು ಕರೆವ ಕಣ್ಣುಗಳಲ್ಲಿ, ಆ ದಿನವಾವುದೋ ದಿವ್ಯತರವಾದ ಒಂದು ಜ್ಯೋತಿ ಹೊರ ಸೂಸುತ್ತ ಬಂದು, ಯಾವುದೋ ಒಂದು ಹೃದಯವನ್ನು ಅರಸುತ್ತಿತ್ತು. ರಾಮು, ಅವಳ ಪ್ರಶಾಂತ ಮುಖವನ್ನು ನೋಡಿದ. ಆಕೆಯ ಮಗ್ಧತೆಯಲ್ಲಿ ರೂಪುಗೊಂಡ ಚೆಲುವನ್ನಷ್ಟೇ ಆತನು ನೋಡಿದ್ದು. ಅವನ ಸೌಂದರ್ಯಾದರ್ಶತೆಯಲ್ಲಿ, ಈ ಚೆಲುವಿಕೆಗೆ ಹೆಚ್ಚು ಬೆಲೆಯಿತ್ತು; ಕಾಂತಿ— ಕಳೆಯಿತ್ತು. ಅವನು ಮನಸ್ಸಿನಲ್ಲಿಯೇ, ಇವಳನ್ನು ತನ್ನ ಹೃದಯದ ರಾಣಿಯಾ ಗಬೇಕೆಂದು ಕೇಳುತ್ತಿರುವಂತೆ ಆತನ ಮುಖವು ಸೂಚಿಸುತ್ತಿತ್ತು. ಅವನು ಆಕೆಯ ಸಮೀಪಕ್ಕೆ ಹೋಗುತಿದ್ದ; ಆದರೆ ಅವರ ನಡುವೆ ಯಾವುದೋ ಒಂದು ಅಂತರ—ಪರದೆಯಿತ್ತು; ಅದು ಬಿಡಲಿಲ್ಲ: ದೂರದಿಂದಲೇ "ನಾನು ಬರು ತ್ತೇನೆ" ಎಂದ. ಆಗ ಅವಳಿಗೆ ಏಕೋ ನಗು ಬಂತು.

ರಾಮು ಗಾಡಿಯಲ್ಲಿ ಕುಳಿತು ಹೊರಟು ಹೋದ. ಸರಲ ಉಪ್ಪರಿಗೆಯನ್ನು ಏರಿ, ಕಂಡಿಯ ಸಂದಿನಲ್ಲಿ ಇಣಿಕಿ ನೋಡಿದಳು. ಬಹು ದೂರದ ವರೆಗೆ ನೋಡಿದಳು. ರಾಮು ತುಂಬಿದ ಜನ ಜಂಗುಳಿಯ ಮಹಾರ್ಗದಲ್ಲಿ, ಕಾಣದಾ ದನು. ಸರಲ ಎಷ್ಟು ಹೊತ್ತು ಅಲ್ಲಿ ಹೀಗೇ ನಿಂತಿದ್ದಳೆಂದು ನಾನರಿಯೆ. ಆದರೆ ಅವಳಿಗೆ ಅಲ್ಲಿಂದ ಎದ್ದು ಆಚೆಗೆ ಸರಿಯುವುದಕ್ಕೂ ಶಕ್ತಿಯಿಲ್ಲದಷ್ಟು ದುರ್ಬಲತೆಯುಂಟಾಯಿತು. ಒಂದು ಹನಿ ಕಂಬನಿ ಆಕೆಯ ಗಲ್ಲವನ್ನು ತೊಯಿಸಿ ತೊಟ್ಟಿಕ್ಕಿತು.

೪

ಸರಲನನ್ನು ರಾಮುಗೆ ಕೊಡುವು ದೆಂದು ಆಕೆಯ ತಂದೆ ತಾಯಿ ಯಾರು ಕೇಳಿದರೂ ಹೇಳುತ್ತಿದ್ದರು. ಸರಲನಿಗೂ ಅದು ಗೊತ್ತು; "ರಾಮು ತನ್ನ ಜೀವ ನದ ಗೆಳೆಯನಾಗಬೇಕು" ಎಂದು ಆಕೆಯು ಹಾರ್ದಿಕ ಸುಖಾಗಮನವಿತ್ತಿ ದ್ದಳು. ನೆರೆಯವರಲ್ಲಿಯೂ ಅದೇ ಮಾತು. ಬರುವ ತಿಂಗಳಲ್ಲಿ ಲಗ್ನವಾಗಬೇಕು, ಪರೀಕ್ಷೆ ಈ ತಿಂಗಳಲ್ಲೇ ಮುಗಿಯುತ್ತದೆ ಎಂದು ಅವರೆಲ್ಲರ ಸೂಚನೆ. ಅದು ಅಸಂಭವವಾದ ಮಾತೂ ಅಲ್ಲ. ರಾಮು ಡಿಗ್ರಿ ಪಡೆದು, ಮನೆಯಲ್ಲಿಯೇ ಇದ್ದು ಬಿಡುವ ಹುಡುಗ. ಅವನಿಗೆ ಜೀವನ ದಲ್ಲಿ ತೊಂದರೆ ಪಡಬೇಕಾಗುವ ಕಾರಣ ವಿಲ್ಲ; ಅವನು ಸ್ಥಿತಿವಂತನಿದ್ದ. ಸಾಗು ವಳಿಯನ್ನು ಮಾಡಿಸಿ, ಲೆಕ್ಕಪತ್ರಗಳನ್ನು ನೋಡಿಕೊಂಡು ಆಡಳಿತವನ್ನು ನಿರ್ವ ಹಿಸುತ್ತ ಬಂದರೆ ಸರಿ. ಸಂಸಾರಕ್ಕೆ ತೊಂದರೆ ಇಲ್ಲ. ಆದರೆ ರಾಮು, ಸರಲನ ತಂದೆಯ ಸೋದರಿಯ ಮಗ,—ಆ ಬಾಂ ಧವ್ಯವನ್ನು ಮುಂದೆ ಸಾಗಿಸಬೇಕೆಂದ ಕಾರಣ ಮುಂದೆ ಸಾಗಿತು. ಆದರೂ ಲಗ್ನದ ನಿಶ್ಚಯವಾಯಿತೆನ್ನಿ.

ಸಂಭ್ರಮದಿಂದ ಮದುವೆಯೂ ನಡೆದು ಹೋಯಿತು.

(ಮುಂದುವರಿಯುವುದು)

To serve you —
— Is our Ambition.

Resources of over A Crore and over Forty Lacs of Surplus Funds—these are the means by which we can serve you. The men in our thirty-eight offices, from the senior-most Director to the junior-most employee, are all eager to serve you. Come in to-day and tell us how we can serve you. Or, if you so prefer, we will call upon you at your request.

CANARA BANK, LIMITED.
ESTD: 1906.

50 ವರ್ಷಗಳಿಂದ ಜಗತ್ಪ್ರಸಿದ್ಧ
ಮದನಮಂಜರಿ
ಮಾತ್ರೆಗಳು
ಬಲಹೀನತೆ, ಮಲಬದ್ಧತೆ, ವೀರ್ಯಸ್ಖಲನ, ಧಾತುವಿಕಾರ ಮೊದಲಾದುವುಗಳನ್ನು ತೀಕ್ಷ್ಣದಲ್ಲೇ ಪರಿಹರಿಸಿ, ರಕ್ತ ಮತ್ತು ವೀರ್ಯಗಳನ್ನು ಧಾರಾಳ ಹೆಚ್ಚಿಸಿ, ದೇಹಕ್ಕೆ ಶಕ್ತಿ, ಸ್ಫೂರ್ತಿ, ಉತ್ಸಾಹಗಳನ್ನು ಕೊಡುತ್ತದೆ.
ಕ್ರಯ: ಡಬ್ಬಿ 1ಕ್ಕೆ 1 ರೂ.
ಮದನಮಂಜರಿ ಫಾರ್ಮಸಿ,
184, ಸೈನಾ ಬಜಾರ್, ಮದ್ರಾಸ್.
ಪುತ್ತೂರು ಏಜೆಂಟರು:—ಪೈ ಫಾರ್ಮಸಿ.

ಕಳೆದ ವಾರ

ಟನಿಗೆ ಎಚ್ಚರಿಕೆ

ಬ್ರಿಟಿಶ್ ಪ್ರಧಾನರಾದ ಮಿ। ಚರ್ಚಿಲ್ಲರು, ಈಚೆಗೆ "ಹೌಸ್ ಆಫ್ ಕಾಮನ್ಸ್" ಸಭಾಮಂದಿರದಲ್ಲಿ ಯುದ್ಧದ ಪರಿಸ್ಥಿತಿಯ ಕುರಿತು ಒಂದು ಭಾಷಣ ಮಾಡುತ್ತ, ಬ್ರಿಟನಿಗೆ ಎಚ್ಚರಿಕೆ ಹೇಳಿರುವರು. ತಾವು ಯಾವ ಭರವಸೆಯನ್ನೂ ಕೊಡಲಾರೆವು, ಹಿಮಗಾಲವೇನೋ ಸಮೀಪಿಸುತ್ತಿರವಾದರೂ, ಅದರಿಂದ ರಷ್ಯದವರ ಮೇಲಿನ ಜರ್ಮನರ ಒತ್ತಾಟ ಕಡಿಮೆ ಆಗಬಹುದೆಂದೇನೂ ಹೇಳಬರುವುದಿಲ್ಲ, ಥವಾ ಹಿಮಗಾಲದಲ್ಲಿ ಬ್ರಿಟನಿನ ಮೇಲಿನ ಯುದ್ಧ ಭೀತಿಯಾದರೂ ಪರಿಹಾರವಾಗಿ, ತಪ್ಪೀತೆಂದು ತಿಳಿಯಲಾರದು, ಸದ್ಯ ಕೊಂಚ ಕಾಲದ ವರೆಗೆ ನಡೆದ್ದ ಪಾಡು ಹೇಗೇ ಇದ್ದರೂ, ಮುಂದಿರುವ ಬೇಸಿಗೆಯಲ್ಲಿ ಅತ್ಯಂತ ಘೋರ ಕಾದಾಟವು ನಡೆಯುವುದೆಂದು ನಾವು ಖಂಡಿತವಾಗಿ ಅರಿತಿರಬೇಕು, ಆಗ ಈ ಯುದ್ಧದ ಮೇಲೆಯೂ ತೀವ್ರವಾದ ಒಂದು ಖಂಡಯಾತ್ರೆಯನ್ನು ನಾವು ನಿರೀಕ್ಷಿಸಬಹುದು; ಆದುದರಿಂದ ಈ "ಜಗತ್ತಿನ ನಾಟಕ"ದಲ್ಲಿ ನಾವು ಯೋಗ್ಯವಾದ ಪಾಗವಹಿಸುವಂತೆ ನಾವು ಸಂಪೂರ್ಣ ಸಿದ್ಧರಾಗಿರಬೇಕು ಎಂದು ಮುಂತಾಗಿ ಎಚ್ಚರಿಸಿದರು. ಇದರಿಂದ ಯುದ್ಧ ಸದ್ಯಕ್ಕೆ ಮುಗಿಯದೆಂಬ ಅರ್ಥವಾಗುತ್ತಿದೆ.

* * * *

ಮಿ। ಅಮರಿಯವರು ಅಮೆರಿಕಕ್ಕೆ

ಭಾರತದ ಕುರಿತಾಗಿ ಪ್ರಚಾರ ಕಾರ್ಯ ನಡೆಸಲು ಪ್ರಚಾರಕರ್ತರನ್ನು ಕಳುಹಿಸುವುದರಿಂದಲೂ ತೃಪ್ತರಾಗದೆ, ಭಾರತೀಯದ ವಿಚಾರದಲ್ಲಿ ಮಾತನಾಡಲಿಕ್ಕವರಿಗೆ ಕೊಡಲಾದ ಭಾಷಣದ ಅಪಾಯಿಂಟು"ಗಳಿಂದಲೂ ತೃಪ್ತರಾಗದೆ ತಾವೇ ಈಗ ಭಾರತದ ಕುರಿತು ಬ್ರಾಡ್‌ಕಾಸ್ಟ್ ಮಾಡಲು ಹೊರಟಿದ್ದಾರೆ. ಸಂತೋಷ! ಆಶ್ಚರ್ಯವೇನೆಂದರೆ, ಇವರೂಡನೆ ಪ್ರಶ್ನೆ ಕೇಳಲು, ಅಮೆರಿಕದ ಭಾರತೀಯ ಮಿಲ್ಯ ಪ್ರಜೆಗಳಲ್ಲಿ, ಕೆಲವರೇ ಯೋಗ್ಯರು ಸಿಕ್ಕಿದುದು; ಅವರು ಕೇಳಿದ್ದು; ಇವರು ಹೇಳಿದ್ದು: ಅಷ್ಟರಿಂದಲೇ ಈ ಪ್ರಶ್ನಾಕರ್ತರು ತೃಪ್ತರಾದಂತೆ ಸುಮ್ಮಗಾದದ್ದು. ಮುತ್ತೆ ಈ ಪ್ರಶ್ನಾಕರ್ತರೇನೂ "ಚಿಲ್ಲರೆ ಆಸಾಮಿ" ಗಳಲ್ಲ. ಪೂರ್ವ ಕ್ಲೀವ್‌ಲ್ಯಾಂಡಿನ ಮಿ। ಕಿಪ್ಪಿ ಸಾಹೇಬರೇನು ಚಿಲ್ಲರೆಯೆ? ಫಿಲ್ಡೆಲ್ಫಿಯ ಮಿ। ಸಾಯರ್ ದೊರೆಗಳೇನು ಸಾಮಾನ್ಯರೆ? ಅಥವಾ ಜಡ್ಜ್ ಆಸ್ಟಿನ್ ಬ್ರಿಫಿತ್ಸ್—ಇವರಂತೂ ದೊಡ್ಡವರೆನ್ನಲು ಯಾರ ಸರ್ಟಿಫಿಕಟೂ ಬೇಡ. ಆದರೆ ಆಶ್ಚರ್ಯವೇನೆಂದರೆ, ಇವರಿಷ್ಟು ಮಂದಿ ಪುಣ್ಯಾತ್ಮರ ಹೆಸರು, ಭಾರತಕ್ಕೆ ತಿಳಿದಿಲ್ಲ ವೆಂದಷ್ಟೇ ಅಲ್ಲ, ಅಮೆರಿಕದವರಲ್ಲಿ ಸೇಕಡಕ್ಕೆ ಸೇಕಡದವರಿಗೆ ಗೊತ್ತಿಲ್ಲವೆಂದೆನಿಸದಷ್ಟೇ ಅಲ್ಲ, ಇವರ ಹೆಸರು, ಈಗ ಮಿ। ಅಮರಿಯವರ ದಯೆಯಿಂದ, ಹೀಗೆ ಪತ್ರಿಕೆಗಳಲ್ಲಿ ಜಾಹಿರಾತು ಆದ ಬಳಿಕವೂ, ಈ ಹೆಸರು ನೆನಪಿನಲ್ಲಿ ಉಳಿಯುವುದೂ ಕಷ್ಟ ಎಂಬುದೇ. ಹೇಗೂ ಕೇಳಿದವರೂ ಹೇಳಿದವರೂ ದೊಡ್ಡವರೇ ಆದುದರಿಂದ, ಇದು "ಕುಂಭಕೋಣ"ದ ಪ್ರಕರಣವಲ್ಲ ಎಂದು ಖಂಡಿತ ತಿಳಿದಿರಬೇಕು. ಒಂದು ವೇಳೆ, ಮಿ। ಅಮರಿಯವರು ಮುಂದೆಯೂ ಇಂತಹ ಎಷ್ಟೋ ಪ್ರಶ್ನೆಗಳಿಗೆ ಉತ್ತರ ಹೇಳಿ, ಅಮೆರಿಕದ ಸಂದೇಹ ಪರಿಹರಿಸಲೂ ಸಾಕು. ಅದು ಬೇಡ–ಬೇಕು ಎನ್ನುವುದಕ್ಕೆ ಯಾರಿಗೆ ಅಧಿಕಾರವಯ್ಯಾ? ಅವರ ಬಾಯಿ, ಅವರ ಅಧಿಕಾರಕ್ಕೆ ಇನ್ನೊಬ್ಬರ ಹಿಡಿತಡೆಯೇ?

* * * *

ಭಾರತದ ಸಮಸ್ಯೆಗಳ ಕುರಿತಾದ

ಸಂದೇಹಗಳನ್ನು ನಿವಾರಿಸಿಕೊಳ್ಳಲು ಮುಂದೆ ಬಂದ ಆ ಪುಣ್ಯಾತ್ಮರಿಗೆ ಮಿ। ಅಮರಿಯವರು ಕೊಟ್ಟ ಉತ್ತರಗಳು, ಅವರ ಮಟ್ಟಿಗೆ ಚೆನ್ನಾಗಿಯೇ ಇವೆ. ಬ್ರಿಟಿಷರು ನಮಗೆ ಸ್ವರಾಜ್ಯವನ್ನು ಕೊಟ್ಟು ಉದ್ಧರಿಸಬೇಕೆಂದು ಎಂದಿನಿಂದಲೋ ಆತುರರಾಗಿ ಕಾದುಕೊಂಡೇ ಇದ್ದರೂ, ನಾವು ನಮ್ಮೊಳಗೆ ಈಗಲೂ ಜಗಳವಾಡುತ್ತ ಅದು ನಮಗೆ ದೊರಕದಂತೆ ನಾವೇ ಅಡ್ಡವಾಗಿ ನಿಂತರೆ ತಪ್ಪು ಅವರದೇ? ಭಾರತದ ತೆರಿಗೆಯ ಮಟ್ಟಿಗೆ, ಬ್ರಿಟನೇ ಇಂಡಿಯದ ರಕ್ಷಣೆಗಾಗಿ ಮಿಲ್ಯಗಟ್ಟಲೆ ಡಾಲರುಗಳ ದ್ರವ್ಯವನ್ನು ಸುರಿಯುತ್ತಿರುವಲ್ಲಿ, ನಾವು ತೆರಿಗೆ ತೆರುತ್ತೇವೆ, ಅದೆಷ್ಟು ಎಂಬುದರ ಲೆಕ್ಕಾಚಾರ ವೇಕೆ ಅಗತ್ಯ? ಆದರೆ, ಒಂದು ವೇಳೆ, 'ಏತಕಯ್ಯ, ಹಾಗಾದರೆ, ಆ ಲುಕ್ಸಾನು ಭಾರತವನ್ನು ಇನ್ನೂ ಕಟ್ಟಿಕೊಂಡಿದ್ದೀರಿ?' ಎಂದು ಯಾರಾದರೂ ಕೇಳಿದರೆ, ಇಂಡಿಯದ ಹಿತಕ್ಕಾಗಿ ಇಷ್ಟು ಒಳ್ಳೆಯ ರೀತಿಯಲ್ಲಿ ಬ್ರಿಟಿಷರಲ್ಲದೆ ಇನ್ನಾರು ಈ ದೇಶವನ್ನು ಪಾಲಿಸಬಲ್ಲರು ಎಂಬ ಉತ್ತರವನ್ನು ಮಿ। ಅಮೆರಿಯವರು ಕೊಡಲು ದಾಕ್ಷಿಣ್ಯಪಟ್ಟರೂ,–ಭಾರತದ ರಾಜಭಕ್ತ ಹಿಂದೀಯರಾದರೂ ಹೇಳಲಾರರೇ? ಈ ಸಂದರ್ಭದಲ್ಲಿ, ಇಂಡಿಯದ ಪಾಲನೆಯ ಕರ್ತವ್ಯವೊಂದನ್ನೇ ದೃಷ್ಟಿಯಲ್ಲಿರಿಸಿಕೊಂಡು—ಎಷ್ಟು ಖರ್ಚಾದರೂ ಸರಿ, ಎಂದು—ಸಾಗಿಸುತ್ತಿರುವ ಬ್ರಿಟನ್, ಇಂಡಿಯದ ಅನುಮತಿ ಕೇಳದೆ, ಇಂಡಿಯದ ಹೆಸರನ್ನು ಯುದ್ಧ ಸಾರಿದ ರಾಷ್ಟ್ರಗಳ ಪಟ್ಟಿಯಲ್ಲಿ ಸೇರಿಸಿತೆಂದು ದೂರುವುದಕ್ಕಾದರೂ ಅವಕಾಶವಿದೆಯೆಲ್ಲಿ? ಆದರೆ, ಮಿ। ಅಮರಿಯವರು ತಮ್ಮ ಅಭಿಪ್ರಾಯವೊಂದನ್ನೇ ಅಮೆರಿಕದವರಿಗೆ ತಿಳಿಸುವಲ್ಲಿ ತೃಪ್ತರಾಗದೆ, ಭಾರತದ ಜನ ನಾಯಕರೂ ಈ ವಿಷಯದಲ್ಲಿ ಏನು ಹೇಳುತ್ತಿರುವರೆಂಬ ಅಂಶವನ್ನು ತಿಳಿಯಲು ಅಮೆರಿಕದವರಿಗೆ ಅವಕಾಶ ಕಲ್ಪಿಸಿಕೊಟ್ಟರೆ, ಆಗ ಬ್ರಿಟಿಷರ ನಿಷ್ಪಕ್ಷಪಾತದ ಬುದ್ಧಿಯ ಪ್ರದರ್ಶನಕ್ಕೂ, ತುಲನೆಗೂ ಒಂದು ಅಮೂಲ್ಯ ಸಂಧಿಯೇ ಒದಗಿದಂತಾಗುವಲ್ಲಿ ಸಂದೇಹವಿಲ್ಲ! ಅದನ್ನು ಮಿ। ಅಮರಿಯವರು ಮಾಡುವರೇ? ಯಾರು ಬಲ್ಲ?





ಈಗ ನಮ್ಮ ಬಟ್ಟೆಗಳು ನಿಶ್ಚಯವಾಗಿಯೂ ಬೆಳ್ಳಗಿವೆ

೫೦೧ "ಸ್ಪೆಷಲ್ ಸಾಬೂನಿನಿಂದ ಒಗೆದರೆ, ಬಟ್ಟೆಗಳೂ ನಾಜೂಕಾದ ವಸ್ತ್ರಗಳೂ ಎಷ್ಟು ಬೆಳ್ಳಗಾಗುತ್ತವೆಯೆಂಬುವುದನ್ನು ನೋಡಿ ನೀವು ಸಂತೋಷಿಸುವಿರಿ. ೫೦೧ "ಸ್ಪೆಷಲ್"ನಲ್ಲಿರುವ ಅಪಾರ ಶಕ್ತಿಯು ಕೊಳೆಯನ್ನೆಲ್ಲಾ ಜಾಗ್ರತೆಯಾಗಿ ತೆಗೆದು ಹಾಕುತ್ತದೆ. ಇದ್ದರೂ ಅದು ಪರಿಶುದ್ಧವಾದುದರಿಂದ ನಾಜೂಕಾದ ವಸ್ತ್ರಗಳಿಗೂ ಬಣ್ಣದ ಬಟ್ಟೆಗಳಿಗೂ, ಹಾನಿಮಾಡುವುದಿಲ್ಲ.

ಇದಕ್ಕೆ ಬೆಲೆ ಕಡಿಮೆ. ಇದು ಮನೆಯ ಕೆಲಸಗಳಿಗೆಲ್ಲಾ ಅತ್ಯಂತ ಸಹಕಾರಿ. ಇದು ಬಿಲ್ಲೆಗಳ ಕ್ಯೂಬ್‌ಗಳು, ಬಾರ್‌ಗಳು, ಮತ್ತು ಸಣ್ಣ ರೂಪಾಂತರಗಳಲ್ಲೂ ಗಿಯೂ ಎಲ್ಲಾ ಸಣ್ಣ ಜೂರುಗಳಲ್ಲೂ ಳಲ್ಲೂ ದೊರಕುವುದು. ಉತ್ತಮ ಆಂಗಡಿಗ ಲ್ಲಿ ಸ್ಪಾಜುಗಳ. ಪ್ಯಾಕೆಟುಗಳಲ್ಲಿ ದೊರಕುತ್ತದೆ.



ಪ್ರಾಣಿಗಳ ಕೊಬ್ಬು ಮಿಶ್ರವಾಗಿಲ್ಲ

೫೦೧ ಸ್ಪೆಶಲ್ ಅಲ್ಲದೆ ಹೆಸರುವಾಸಿಯಾದ ೫೦೧ ವಾಷಿಂಗ್ ಸೋಪ್ ಸಹ ಉಂಟು.

ಟಾಮ್ಕೊ ಸೇಲ್ಸ್ ಡಿಪಾರ್ಟ್‌ಮೆಂಟ್, 2A ಸೌತ್ ಪೆರೆಡ್, ಬೆಂಗಳೂರು.

ದಿ ತಾತಾ ಆಯಿಲ್ ಮಿಲ್ಸ್ ಕಂಪೆನಿ ಲಿ., ತಾತಾಪುರಂ ಮತ್ತು ಬೊಂಬಾಯಿ.

ಕುಂದಾಪುರ ನಾಡ ಹಬ್ಬದಲ್ಲಿ ಭಾಗವಹಿಸಿದವರು:—
ನಿಂತವರು:
ಕುಮಾರಿ ಆರೂರು ಸುನಿತಾದೇವಿ ಕುಂದಾಪುರ.
ಕೂತವರು: ಕುಮಾರಿ ಯಶೋದಾ ಐತಾಳ, ಉಡ್ಪಿ.
(ವಿವರಕ್ಕೆ ಅನೇ ಪುಟ ನೋಡಿ)

ಡಾ। ರಾಘವೇಂದ್ರ ರಾಯರ ಹೇಳಿಕೆ

ವೈಸರಾಯರ ಕೌನ್ಸಿಲಿನ ಮೆಂಬರರಾದ ಮೇಲ್ಕಂಡ ಮಹನೀಯರು ಒಂದು ಹೇಳಿಕೆ ಕೊಡುತ್ತ "ಇಂಡಿಯದ ಯಾವತ್ತು ರಾಜಕೀಯ ಪಂಗಡಗಳೂ ಒಂದಾಗದ ವಿನಾ, ಭಾರತಕ್ಕೆ ಶಾಶ್ವತವಾದ ರಾಜ್ಯ ಸುಧಾರಣೆ ದೊರೆಯದು, ಡೊಮಿನಿಯನ್‌ಗಳಂತೆಯೇ ಭಾರತವೂ ಯುದ್ಧಪ್ರಯತ್ನಗಳಲ್ಲಿ ಸಹಕರಿಸಿ, ಉತ್ಸಾಹ ತೋರಬೇಕು" ಎಂದರು.

ಮಂಗಳೂರು

ಮಂಗಳೂರು ಸ್ಟೂಡೆಂಟ್ಸ್ ಯೂನಿಯನ್

ಈ ಯೂನಿಯನಿನ ಕಾರ್ಯಕಾರಿ ಸಮಿತಿಯು ಕಳೆದ ತಾ. ೩ರಲ್ಲಿ ಶ್ರೀ। ಕೆ. ಬಿ. ಜಿನರಾಜ ಹೆಗ್ಗಡೆ ಎಂ. ಎಲ್. ಎ. (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ನೆರೆದು ರಷ್ಯದೊಡನೆ ಸಹಾನುಭೂತಿ ಪ್ರಕಟಿಸಿ, ಸೋವಿಯೆಟ್ ದಿನಾಚರಣೆಯ ಮೂಲಕ ರಷ್ಯಕ್ಕೆ ಶಕ್ಯವಿರುವಷ್ಟು ಧನಸಹಾಯ ಮಾಡಬೇಕೆಂದೂ ನಿಖಿಲಭಾರತ ವಿದ್ಯಾರ್ಥಿ ಸಂಘದ ಜನರಲ್ ಸೆಕ್ರಟರಿ ಜನಾಬ್ ಫರೂಕಿಯವರನ್ನೂ, "ಸ್ಟೂಡೆಂಟ್" ಪತ್ರಿಕಾ ಸಂಪಾದಕ ಶ್ರೀ। ಅಲಿತಾಶಂಕರರನ್ನೂ ಬಿಡುಗಡೆ ಮಾಡುವಂತೆ ಸರಕಾರವನ್ನು ಪ್ರಾರ್ಥಿಸಬೇಕೆಂದೂ ಮುಂತಾಗಿ ನಿರ್ಧಾರವಾಯಿತು.

ಗಾಂಧಿ ಜಯಂತಿ

ಜಿ. ಹರಿಜನಸೇವಕ ಸಂಘದವರ ಪರವಾಗಿ ಕಳೆದ ತಾ. ೨ರಲ್ಲಿ, ಡಿ. ಸಿ. ಯಂ. ಶಾಲೆಯಲ್ಲಿ, ಶ್ರೀ। ಯು. ಗೋವಿಂದರಾಯರ ಅಧ್ಯಕ್ಷತೆಯಲ್ಲಿ ಗಾಂಧಿ ಜಯಂತಿಯನ್ನು ಆಚರಿಸಲಾಯಿತು. ಶ್ರೀ। ಎನ್. ಎಸ್. ಕಿಲ್ಲೆಯವರಿಂದ ಮಹಾತ್ಮರ ಜೀವನ ಚರಿತ್ರೆಯ ನಿರೂಪಣೆಯಾಗಿ, ಗಾಂಧಿಯವರ ಶ್ರೇಯಃಪ್ರಾರ್ಥನೆ, ಅಧ್ಯಕ್ಷರ ಭಾಷಣಾದಿಗಳೊಡನೆ ಸಭೆ ಮುಗಿಯಿತು.

ವರ್ಗಾವರ್ಗಿ

ಕಯ್ಯೂರು ವಿಚಾರಣೆಗಾಗಿ ಸ್ಪೆಶಲ್ ಕೋರ್ಟಿಯ ಮೇಲಿದ್ದ ಶ್ರೀ। ಎಂ. ಬಿ. ಶಂಕರರಾವ್ ಬಿ. ಏ., ಇವರು ಕುಂದಾಪುರ ತಹಶೀಲ್ದಾರರಾಗಿಯೂ, ಕುಂದಾಪುರದ ಹಂಗಾಮಿ ತಹಶೀಲ್ದಾರ್ ಶ್ರೀ। ಯು. ಜನಾರ್ದನ ಬಿ. ಏ., ಅವರು ಕಾಸರಗೋಡು ಸ್ಟೇ। ಸ। ಮ್ಯಾಜಿಸ್ಟ್ರೇಟರಾಗಿಯೂ ನೇಮಕಹೊಂದಿದ್ದಾರೆ.

ಮಂಗಳೂರಿನ ಅಸಿ। ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಮಿ। ಸೊಲಮನ್ ಜೋಶ್ವ ಬಿ. ಏ., ಅವರು ೩॥ ತಿಂಗಳ ರಜೆ ಪಡೆದಿರುವುದರಿಂದ, ಆ ಸ್ಥಾನಕ್ಕೆ ಕಾಸರಗೋಡಿನ ಅಸಿ। ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಶ್ರೀ। ಪಿ. ಎಸ್. ತಿಮ್ಮಪ್ಪ ಸೆಟ್ಟಿ ಬಿ. ಏ., ಅವರೂ, ಶ್ರೀ। ಸೆಟ್ಟರ ಆ ಸ್ಥಾನಕ್ಕೆ ಕಾಸರಗೋಡಿನ ಸ್ಟೇ। ಸ। ಮ್ಯಾಜಿಸ್ಟ್ರೇಟ್. ಮಿ। ಪಳ್ಳಿ ಬ್ಯಾರಿಯವರೂ ನೇಮಕಹೊಂದಿದ್ದಾರೆ.

ಮಂಗಳೂರಿನ ಫಲಪುಷ್ಪ ಪ್ರದರ್ಶನ

ಮಂಗಳೂರಿನ ಒಂಭತ್ತನೆಯ ಫಲಪುಷ್ಪ ಪ್ರದರ್ಶನವನ್ನು ಕಳೆದ ಆದಿತ್ಯವಾರ ಮಧ್ಯಾಹ್ನ ೧೨ ಗಂಟೆಗೆ, ಸ್ಥಳೀಯ ಗವರ್ನ್‌ಮೆಂಟ್ ಕಾಲೇಜಿನಲ್ಲಿ ನಮ್ಮ ಮಾನ್ಯ ಗವರ್ನರರ ಎಡ್ಜ್‌ಟೈಜರರಾದ ಮಿ। ಟಿ. ಆಸ್ಪಿನ್‌ರವರು ತೆರೆದರು. ಈ ಪ್ರದರ್ಶನದ ಉತ್ಪತ್ತಿಯನ್ನು ಯುದ್ಧ ನಿಧಿಗೆ ಕೂಡಲಾಗುವುದೆಂದು ತಿಳಿದು ಬಂದಿದೆ. ಎಂದಿನಂತೆ ಈ ಸಲವೂ ಫಲ ಪುಷ್ಪ, ತರುಲತೆಗಳು ಪ್ರದರ್ಶನಕ್ಕೆ ಬಂದಿವೆ.

ಮಂಗಳೂರು ಸೆಂಟ್ರಲ್ ಕೊ-ಒಪರೇಟಿವ್ ಸ್ಟೋರಿನ

ಶಾಖೆಯೊಂದನ್ನು ಪಂಟಲೆಂಡ್ ಪೇಟೆಯಲ್ಲಿ, ಶ್ರೀ। ವಿಟ್ಟಪ್ಪಯ್ಯನವರ ಅಂಗಡಿಯಲ್ಲಿ, ಮಂಗಳೂರ ಸಹಕಾರ ಸಂಘಗಳ ಡೆಪ್ಯುಟಿ ರೆಜಿಸ್ಟ್ರಾರವರ ಸಮಕ್ಷದಲ್ಲಿ ಇದೇ ೫ನೆ ತಾರೀಕಿನಲ್ಲಿ ಬೆಳಗ್ಗೆ ೮-೩೦ ಗಂಟೆಗೆ ಅವರ ಕೈಯಿಂದ ತೆರೆಯೋಣಾಯಿತು.

PETROL RATIONING

Less motor spirit means more scope for public spirit. Subscribe your petrol savings to the

Governor's War Fund.

ಮೃದು ಚರ್ಮಕ್ಕೆ

ಪರಿಶುದ್ಧವೂ, ನಯವೂ ಆದ ಸಾಬೂನಿನ ಅವಶ್ಯಕತೆಯಿದೆ.

ಮಗುವಿನ ಮೃದು ಚರ್ಮಕ್ಕೆ, ಕಾಂತಿಗೆ ಸಮಾನವಾದುದು ಬೇರಾವುದೂ ಇಲ್ಲ. ಏಕೆಂದರೆ ಕಾಂತಿಯು ಶತಮಾನಗಳಿಂದ ಚರ್ಮದ ಆರೋಗ್ಯಕ್ಕೂ ಸೌಂದರ್ಯಕ್ಕೂ ಅತ್ಯಂತ ಸಮಾಧಾನಕಾರಿಯೂ, ಮುಖ್ಯ ಸಹಾಯಕಾರಿಯೂ ಆದ ಪರಿಶುದ್ಧ ವನಸ್ಪತೀಯ ತೈಲಗಳಿಂದಲೇ ಮಾಡಲ್ಪಡುತ್ತದೆ.

ಕಾಂತಿಯು ನಿಮಗೂ ಅಷ್ಟೇ ಉತ್ತಮವಾಗಿರುತ್ತದೆ. ಅದರ ಸಮೃದ್ಧವಾದ ನೊರೆಯು ಚರ್ಮದ ಪ್ರತಿಯೊಂದು

ರಂಧ್ರದೊಳಕ್ಕೂ ಹೋಗುತ್ತದೆ. ಮತ್ತು ಅಂಟಿಕೊಂಡಿರುವ ಕೊಳೆಯನ್ನೆಲ್ಲವನ್ನೂ ಚೂರನ್ನು ತೆಗೆಯುತ್ತದೆ.

ಕಾಂತಿ ಸಾಬೂನನ್ನು ಪ್ರಯೋಗಿಸಿ, ಮತ್ತು ನಿಮ್ಮ ಚರ್ಮವು ನುಣುಪಾಗಿಯೂ, ಮೃದುವಾಗಿಯೂ ಸೌಂದರ್ಯಕನುವಾಗಿಯೂ, ಬೆಳೆಯುವುದನ್ನು ನಿರೀಕ್ಷಿಸಿರಿ.

* ಕಾಂತಿ ಸಾಬೂನು *

ಅದರಲ್ಲಿ ಪ್ರಾಣಿಗಳ ಕೊಬ್ಬು ಏನೊಂದು ಕೂಡಿಲ್ಲವೆಂಬುದನ್ನು ನೆನಪಿನಲ್ಲಿಡಿ. ತಯಾರಿಸಿದವರು:
ಸ್ವಸ್ತಿಕ್ ಆಯಿಲ್ ಮಿಲ್ಸ್ ಲಿ। ಬೊಂಬಾಯಿ 15

Manufactured by SWASTIK OIL MILLS LTD., BOMBAY-15.

ಕುಂದಾಪುರ

ನಾಡ ಹಬ್ಬ

ಕುಂದಾಪುರದ ನಾಡಹಬ್ಬದ ೨ನೇ ದಿನದ ಕಾರ್ಯಕ್ರಮವು, ತಾ. ೩೦ರಲ್ಲು ಕರ್ನಾಟಕ ಸಾಹಿತ್ಯ ಸಂಘದ ವಠಾರದಲ್ಲಿ ಜರಗಿತು. ಶ್ರೀ। ವಿ. ಎಸ್. ಶೆಟ್ಟಿ ಅವರು "ಕರ್ನಾಟಕದ ಏಕೀಕರಣವೂ ದಕ್ಷಿಣ ಕನ್ನಡವೂ" ಎಂಬ ವಿಷಯದಲ್ಲಿಯೂ, ಶ್ರೀ। ಕೋಣಿ ಅಣ್ಣಪ್ಪ ಕಾರಂತರು "ಕರ್ನಾಟಕದ ಪೌರಾಣಿಕ ವೈಶಿಷ್ಟ್ಯ"ವೆಂಬ ವಿಷಯದಲ್ಲಿಯೂ ಭಾಷಣ ಮಾಡಿದರು. ಶ್ರೀ। ಕೋಣಿ ವಾಸುದೇವ ಹೆಬ್ಬಾರರು ಭಾರತದ ಪದ್ಯಗಳನ್ನು ವಾಚನಮಾಡಿದರು. ತಾರೀಕು ೨೮ರಲ್ಲು ಶ್ರೀ ಕುಂದೇಶ್ವರ ಸಾರ್ವಜನಿಕ ವ್ಯಾಯಾಮ ಶಾಲೆಯವರ ಅಂಗಸಾಧನೆಗಳೂ, ಶ್ರೀ। ವಕೀಲ್ ಕೆ. ಯಸ್. ಕಾರಂತರ "ಕನ್ನಡ ನಾಡಿನ ಧರ್ಮ" ವಿಷಯದ ಭಾಷಣವೂ, ಶ್ರೀ। ವಾಸುದೇವ ನಾಯಕ ಮುಂತಾದವರ ಸಂಗೀತವೂ ಇದ್ದುವು.

ತಾ. ೨೯ರಲ್ಲಿ ವಕೀಲ್ ಎ. ವಿ. ಎನ್. ಹೆಬ್ಬಾರ್‌ರು "ನಮ್ಮ ನಾಡಿನ ಮಹಾ ಪುರುಷರು" ಎಂಬ ವಿಷಯದಲ್ಲಿಯೂ, ಶ್ರೀ। ಬಿ. ಎಮ್. ಕುಡುಬಿ ಅವರು ಶ್ರೀ ಕುಮಾರ ವ್ಯಾಸನ ಕಾವ್ಯ ಮತ್ತು ಕವಿತಾ ಚಮತ್ಕಾರಗಳ ವಿಷಯದಲ್ಲಿಯೂ ಮಾತಾಡಿದರು. ಶ್ರೀ। ಬಿ. ಸಂಜೀವ ರಾವ್ ಮತ್ತು ಪಾರ್ಟಿಯವರ ವಿನೋದ ಕಾರ್ಯಕ್ರಮವೂ ಇತ್ತು. ತಾ. ೩೦ರಲ್ಲು ಶ್ರೀ। ವಕೀಲ್ ಕೆ. ಎಸ್. ಕಾರಂತರ ಭಾಷಣವಿತ್ತು. ಶ್ರೀ। ಕೆ. ಎಸ್. ಪದ್ಮನಾಚಾರ್, ಕುಮಾರಿ ಆರೂರು ಲೀಲಾದೇವಿ ಮುಂತಾದವರ ಸಂಗೀತವೂ, ಕುಮಾರಿ ಆರೂರು ಸುನೀತಾ ದೇವಿಯ ಜಲತರಂಗ, ಸತಾರಾ ಗಾಯನವೂ, ನರ್ತನವೂ ಸಭಿಕರನ್ನು ಸಂತೋಷಗೊಳಿಸಿತು.

ಕುಮಾರಿ ಆರೂರು ಸುನೀತಾದೇವಿ

ಕುಮಾರಿ ಯಶೋದಾ ಐತಾಳ್ ಮತ್ತು ಕುಮಾರಿ ಆರೂರು ಸುನೀತಾ ದೇವಿ ಇವರಿಬ್ಬರ ಸರಸ ನಾಟಕಾಭಿನಯವೂ, ಮೂಕಾಂಬಿಕಾ ಶಾಲೆಯವರ ವಿನೋದ ಪ್ರದರ್ಶನಗಳೂ ಚೆನ್ನಾಗಿದ್ದುವು. ಸಾವಿರಾರು ಮಂದಿ ಪ್ರತಿ ನಿತ್ಯವೂ ಈ ಸಂಭ್ರಮೋತ್ಸವಕ್ಕೆ ಸೇರುತ್ತಿದ್ದರು.

ಕಳೆದ ತಾ. ೨ರಲ್ಲು ಶ್ರೀ। ವಕೀಲ್ ಕೆ. ಎಸ್. ಕಾರಂತರ ಅಧ್ಯಕ್ಷತೆಯಲ್ಲಿ ಮಹಾತ್ಮಾ ಗಾಂಧಿಯವರ ಜನ್ಮ ದಿನಾಚರಣೆಯು ಜರಗಿತು. ವಿದ್ವಾನ್ ಕಟೀಲು ಗಣಪತಿ ಶರ್ಮ, ವಿದ್ವಾನ್ ಪಿ. ಕೆ. ಆಚಾರ್ಯ, ಶ್ರೀ। ಕೆ. ಎ. ಕಾರಂತ, ಮುಂತಾದ ಮಹನೀಯರು ಮಹಾತ್ಮರ ಗುಣಗಾನ ಮಾಡಿದರು. ಅಧ್ಯಕ್ಷರ ಸರಸ ಭಾಷಣವಾದ ಮೇಲೆ ಧನ್ಯವಾದವನ್ನರ್ಪಿಸಲಾಯಿತು.

ಇಟೆಲಿಯಲ್ಲಿ ಫ್ಯಾಸಿಸಮ್ಮಿನ ಜನ್ಮದಾತಾರರು

(೩ನೇ ಪುಟದಿಂದ ಮುಂದುವರಿದುದು)

ಎಪ್ಪತ್ತನಾಲ್ಕರ ಮುದುಕ!

ಫ್ಯಾಸಿಸ್ಟ್ ಕ್ರಾಂತಿಯನ್ನು ಮಾಡಿದ ನಾಲ್ವರ ಪ್ರಧಾನ ಸಮಿತಿಯ ಸದಸ್ಯರಲ್ಲಿ ಒಬ್ಬ—ಮೈ ಖಿಲ್ ಬಿಯಾಂಚಿ—ತೀರಿ ಹೋಗಿರುವನು. (ಬಾಲ್ಬೊ ಅಪಮೃತ್ಯುವಿಗೆ ಗುರಿಯಾದ.)

ಈ ಎಪ್ಪತ್ತನಾಲ್ಕರ ಮುದುಕ, ಮುಸೋಲಿನಿಯ ಬಲಗೈ ಬಂಟನಾಗಿದುಡಿದಿದ್ದಾನೆ. ರೋಮಿನ ಜೈತ್ರ ಯಾತ್ರೆಗೆ ಎಲ್ಲವೂ ಸಿದ್ಧವಾದಾಗ, ಫ್ಲೋರೆನ್ಸಿನಲ್ಲಿ ಸೇನೆಯೊಂದನ್ನು ಸಜ್ಜುಗೊಳಿಸಿ, ಮುಸೋಲಿನಿಗೆ "ಬಾ! ಊಟ ಸಿದ್ಧವಾಗಿದೆ. ಬಟ್ಟಲಿಗೆ ಬಡಿಸಿಯೂ ಆಗಿದೆ. ನೀನು ಬಂದು ಮೇಜಿನ ಬಳಿ ಕುಳಿತರಷ್ಟೇ ಆಯಿತು" ಎಂದು ತಂತಿ ಕಳುಹಿಸಿದವನು ಇವನೇ.

ಇವನ ಹೆಸರು ಜನರಲ್ ಎಮಿಲಿಯೊ ಡಿಬೋನೊ.

ಕ್ರಾಂತಿಯ ಬಳಿಕ, ಈ ಬಿಳಿ ವಿಾಸೆ ಗಡ್ಡಗಳ, ದೀರ್ಘ ದೇಹದ ಮುದುಕನಿಗೆ, ಅತಿ ಪ್ರಧಾನ ಸ್ಥಾನಗಳು ದೊರಕಿದುವು. ಅಬಿಸೀನಿಯಕ್ಕೆದುರಾಗಿ ಯುದ್ಧ ಹೂಡಲು ಗುಪ್ತವಾಗಿ ಬೇಕಾದ ಸಿದ್ಧತೆಗಳನ್ನೆಲ್ಲ ಮಾಡಿದವರಲ್ಲಿ, ಇವನೂ ಒಬ್ಬ.

ಈ ವಿಶ್ವಾಸಿಯಾದ ಸೇನಾಧಿಪತಿಯೇ ಅಬಿಸೀನಿಯಾ ಯುದ್ಧದ ಆರಂಭದ ತಿಂಗಳುಗಳಲ್ಲಿ ಆ ನಾಡಿನೊಳಕ್ಕೆ ಇಟೆಲಿಯ ಸೇನೆಗಳನ್ನು ನಡೆಸಿದವನು. ಆದರೆ ಮಾರ್ಗಗಳನ್ನು ನಿರ್ಮಿಸಿಯೇ, ಆ ಗುಡ್ಡಗಾಡಿನಲ್ಲಿ ಮುಂದೆ ಸಾಗಬೇಕಾಯಿತಾದ್ದರಿಂದ, ಮುನ್ನಡೆ ಶೀಘ್ರವಾಗಿ ಆಗಲಿಲ್ಲ. ಮುಸೋಲಿನಿ ಈ ಮುದುಕನನ್ನು ಹಿಂದಕ್ಕೆ ಕರೆದ. ಮುಸ್ಸೋ ಯಾವಾಗಲೂ ಹೀಗೆಯೇ.

ಕವಿ—ಕಲಾವಿದ

ಕ್ವಾಡ್ರುಮ್ ಏರ್ ಸೀಸರ್ ಡಿವೆಚಿ ಜನಿಸಿದುದು ೧೮೭೪ರಲ್ಲಿ. ೧೯೨೪ರ ಬಳಿಕ, ಕೋಂಟ್ ಡಿವಾಲ್ ಸಿಸ್ಮನ್ ಎಂದು ಹೆಸರುವಾಸಿಯಾದ. ಈತ ನೊಬ್ಬ ಲಾಯರು, ಚಿತ್ರಕಾರ ಮತ್ತು ಕವಿ. "ವಸಂತ ಗೀತಗಳು" ಎಂಬ ಗ್ರಂಥವನ್ನು ರಚಿಸಿದವನೂ ಇವನೇ. ೧೯೨೦ರಲ್ಲಿ ಮುಸೋಲಿನಿಯ ಸಂಗಾತಿಯಾಗಿದ್ದು, ಮುಸೋಲಿನಿಯನ್ನು ಅಭಿಪ್ರಾಯ ವ್ಯತ್ಯಾಸದಿಂದಾಗಿ ಸಂಪಾದಕ ಸ್ಥಾನದಿಂದ ಹೊರಕಳುಹಿಸಿದ "ಅವಂತಿ" ಎಂಬ ಸಮತಾವಾದೀ ಪತ್ರಿಕೆಯ ಕಾರ್ಯಾಲಯವನ್ನು ಹೊಕ್ಕು ಸೂದೆ ಮಾಡಿದವನು ಈ ಮಹಾನುಭಾವ.

ಫ್ಯಾಸಿಸ್ಟ್ ಕ್ರಾಂತಿ ನಡೆಯುತ್ತಿದ್ದಾಗಲೆಲ್ಲ, ರೋಮಿನ ಪೋಪಿಗೆ, ಬೆದರದಂತೆ ಆಶ್ವಾಸನೆಗಳನ್ನು ಈತ ಕಳುಹಿಸಿರುವನು.

ಪತ್ರಿಕೋದ್ಯಮಿ ಫಾರಿನಾಕಿ

ಅರ್ಧ ಶತಮಾನವಾಗತ್ತಾ ಬಂತು ಸೀನರ್ ರೋಬರ್ಟೋ ಫಾರಿನಾಕಿಗೆ. ಮೊದಮೊದಲು ಒಬ್ಬ ರೈಲ್ವೆ ಕೂಲಿಯಾಗಿ ಜೀವಿಸುತಿದ್ದು, ಅತ್ಯುಗ್ರ ಸಮತಾವಾದಿಯಾಗಿದ್ದ. ಯುದ್ಧದ ಬಳಿಕ ಕಮ್ಯೂನಿಸ್ಟ್ ವಿರೋಧಿಯಾದ.

ಬಳಿಕ ಪತ್ರಿಕೋದ್ಯಮಿಯಾಗಿ "ರೆಜಿಮಾ ಫ್ಯಾಸಿಸ್ಟಾ" ಎಂಬ ಪತ್ರಿಕೆಯನ್ನು ಸ್ಥಾಪಿಸಿದ. ೧೯೨೪ರಲ್ಲಿ ಸಮತಾವಾದೀ ನಾಯಕನಾದ. ಮೊಟ್ಟಯೊಟ್ಟಿಯ ಕೊಲೆಯಾದಾಗ ಕೊಲೆಗಾರರನ್ನು ಸಮರ್ಥಿಸಿ, 'ಅಂತಹ ಫ್ಯಾಸಿಸ್ಟ್ ವಿರೋಧಿಗಳನ್ನು ಕೊಂದುದು ಸರಿ' ಎಂದು ಸಾಧಿಸಿದ್ದಾನೆ ಈತ.

ಜರ್ಮನಿಯು ಜ್ಯೂ ಬೇಟೆಗಾರ ಸ್ಟ್ರೀಶರನ್ನು ಫಾರಿನಾಕಿ ಪ್ರೀತಿಸುತ್ತಾನೆ. ಇಟೆಲಿಯಲ್ಲಿಯೂ ಜಾತಿಯ ಭಾವನೆಯನ್ನು ಹರಡಿ, "ಇಟಾಲಿಯನ್ ಪಂಗಡ" ವೆಂಬುದೊಂದಿದೆಯೆಂದು ಜನರಿಗೆ ತೋರಿಸಿಕೊಟ್ಟ 'ಶ್ರೇಯಸ್ಸು' [?] ಇವನಿಗೆ ಸಲ್ಲಬೇಕು.

ಕೆಲ ವರ್ಷಗಳ ವರೆಗೆ ಈ ತೀವ್ರಗಾಮಿಯ ಸದ್ದೇ ಅಡಗಿಹೋಯಿತು.

ಆದರೆ ರಾಜ್ಯಾಂಗ ಮಂತ್ರಿಯಾಗಿ ಮುಸೋಲಿನಿಯಿಂದ ನೇಮಿಸಲ್ಪಟ್ಟೊಡನೆ, ಪುನಃ ಬೆಳಕಿಗೆ ಬಂದ.

"ಇಟೆಲಿಯ ಹಿಮ್ಲರ್"

ಇಟೆಲಿಯ ಗುಪ್ತಚಾರಿಗಳ ಸಂಸ್ಥೆಯಾದ ಒ. ವಿ. ಆರ್. ಎ. (ಒವ್ರಾ) ಯನ್ನು ಸಂಘಟಿಸಿ, ಸುವ್ಯವಸ್ಥಿತವಾಗಿ ನಡೆಸುತ್ತಿರುವ ಕೀರ್ತಿ (?) ಆರ್ಟುರೋ ಬೊಕ್ಕಿನಿಗೆ ಸಲ್ಲಬೇಕು.

ಪ್ರತಿದಿನ ಮುಂಜಾನೆ ಪ್ಯಾಲೆಸ್ಟೊವೆನ್ಸಿಯಾದಲ್ಲಿ ಬೊಕ್ಕಿನಿಯನ್ನು ಕಾಣಬಹುದು. ತಾನು ಸಂಗ್ರಹಿಸಿದ ವಾರ್ತೆಗಳನ್ನು ಮುಸೋಲಿನಿಗೆ ತಿಳಿಸುವುದಕ್ಕಾಗಿ, ಅವನು ಅಲ್ಲಿಗೆ ಬರುತ್ತಾನೆ.

ಇಟೆಲಿಯಲ್ಲಿ/ ಅವನಿಗೆ ತಿಳಿಯದ ರಹಸ್ಯವೇ ಇಲ್ಲವೆಂದರೆ ತಪ್ಪಾಗದು. ಇತರ ಎಲ್ಲಾ ಮಂತ್ರಿಗಳಿಗಿಂತಲೂ, ಈತನಿಗೇ ಮುಸೋಲಿನಿಯ ಮೇಲೆ ಹೆಚ್ಚಿನ ಪ್ರಭಾವವಿದೆಯೆಂದು ತಿಳಿದುಬಂದಿದೆ. ಅಬಿಸೀನಿಯವನ್ನು ಮುಸೋಲಿನಿ ಆಕ್ರಮಿಸುವುದಕ್ಕೂ ಹಿಟ್ಲರರ ಜಗಳಗಂಟ ವೃತ್ತಿಗೆ ಸಮ್ಮತಿ ಸೂಚಿಸುವುದಕ್ಕೂ ಈತನೇ ಕಾರಣನೆಂದು ಪ್ರತೀತಿ ಇದೆ.

ಮುಸೋಲಿನಿಯ ಪ್ರಾಣಕ್ಕೂ ಇವನೇ ಜವಾಬ್ದಾರ. ಅಂತೆಯೇ ಜರ್ಮನಿಯ ಹಿಮ್ಲರ್‌ನಂತೆಯೇ ನಿರ್ದಯನಾಗಿದ್ದಾನೆ.

ಫ್ಯಾಸಿಸ್ಟ್ ಪಾರ್ಟಿಯ ಸಮ್ಮಾರ್ಜನ ಕಾರ್ಯವನ್ನು, ಈತ ಮಾಡುತ್ತಿದ್ದಾನೆ. ಅಂತೆಯೇ, ಇಂದು ಫ್ಯಾಸಿಸ್ಟ್ ಮುಖಂಡರೆಂದು ಕರೆಯಲ್ಪಡುವವರೆಲ್ಲೋ ಮಂದಿಯ ಹೆಸರುಗಳು ನಾಳೆ ಜೈಲು ಕೈದಿಗಳ ಪಟ್ಟಿಯಲ್ಲಿಯೋ, ಹುಚ್ಚಾಸ್ಪತ್ರೆಯ ದಾಖಲೆಯಲ್ಲಿಯೋ ಕಂಡುಬರುವುದು.


'ಆಸ್ಪ್ರೋ'ನೋವು
ಮತ್ತು ಜ್ವರವನ್ನು ನಿಲ್ಲಿಸುವ
ಜಗತ್ತಿನಲ್ಲೆಲ್ಲಾ ಮಹದಾಪ್ತ
ಧವಾಗಿದೆ
INDIA
AN 1NA
1940
MADE IN ENGLAND
5 TABLETS
ASPRO
REG TRADE MARK
'ಆಸ್ಪ್ರೋ' ಈಗ ಹಿಂದೂಸ್ಥಾನದಲ್ಲಿ ಮನೆ ಔಷಧಿಯಾಗಿದೆ, ಮಗುವಿನಿಂದ ತಂದೆಯವರಿಗೆ ಎಲ್ಲರ ಬಾಧೆ ಮತ್ತು ಜ್ವರವನ್ನು ನಿಲ್ಲಿಸುತ್ತೆ, ಇದು ತೀವ್ರವಾಗಿ ಕ್ರಿಯೆಮಾಡುತ್ತೆ, ಮತ್ತು ಒಂದು ಮಗು ಸಹ ತೆಗೆದು ಕೊಳ್ಳುವಷ್ಟು ಕ್ಷೇಮಕರವಾಗಿದೆ.
'ಆಸ್ಪ್ರೋ' ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ. ಪ್ರತಿ ಮಾತ್ರೆಯೂ ತೀವ್ರ ತಾಕದ ಪ್ರತ್ಯೇಕ ವಿಭಾಗಗಳಲ್ಲಿ ಮೊಹರಾಗಿವೆ ಮತ್ತು ಅನೇಕ ವರ್ಷ ಪರ್ಯಂತ ಹೊಸದಾಗಿಯೇ ಇರುತ್ತವೆ.
ಆಸ್ಪ್ರೋ'ನಲ್ಲಿ ೧೨ ಔಷಧಗಳು ಅಡಕವಾಗಿವೆ
'ಆಸ್ಪ್ರೋ' ಮಲೇರಿಯಾ ಜ್ವರವನ್ನು ಜಾಗ್ರತೆ ಓಡಿಸುತ್ತೆ ಮತ್ತು ನೋವು ಮತ್ತು ಬಾಧೆಗಳನ್ನು ನಿಲ್ಲಿಸುತ್ತೆ.
ತಲೆನೋವನ್ನು ೫ ನಿಮಿಷದಲ್ಲಿ ನಿಲ್ಲಿಸುತ್ತದೆ.
ಸಂಧಿವಾತವನ್ನು ಒಂದೇ ರಾತ್ರಿಯಲ್ಲಿ ಪರಿಹರಿಸುತ್ತೆ.
ಜ್ವರವನ್ನು ಕೆಲವು ಗಳಿಗೆಗಳಲ್ಲಿ ತಗ್ಗಿಸುತ್ತೆ.
ಹಲ್ಲು ನೋವು, ಮತ್ತು ಪರಿವಾತವನ್ನು ನಿಲ್ಲಿಸುತ್ತೆ.
ನೋವು ಮತ್ತು ಬಾಧೆಗಳನ್ನು ಶಮನಮಾಡುತ್ತೆ.
ನಿದ್ರಾರಹಿತರಿಗೆ ಸುಖನಿದ್ರೆ ಕೊಡುತ್ತೆ.
ಮುಂಗೋಪತನವನ್ನು ನಿಲ್ಲಿಸುತ್ತೆ.
ಹೆಂಗಸರ ಬಾಧೆಗಳನ್ನು ತಡೆಯುತ್ತೆ.
ಮುಕ್ಕುಳಿಸುವುದರಿಂದ ಗಂಟಲ ಬಾಧೆ ಗುಣವಾಗುತ್ತೆ.
ಶೀತ ಮತ್ತು ಇನ್‌ಫ್ಲುಯೆಂಜಾವನ್ನು ತಡೆಯುತ್ತೆ.
ಡೆಂಗ್ಯೂ ಜ್ವರವನ್ನು ತೀವ್ರವಾಗಿ ಗುಣಪಡಿಸುತ್ತೆ.
ಸಾಂಕ್ರಾಮಿಕ ರೋಗಗಳಿಂದ ಮುಕ್ತತೆಕೊಡುತ್ತೆ.
'ಆಸ್ಪ್ರೋ' ಹೃದಯ ಅಥವಾ ಉದರಕ್ಕೆ ತೊಂದರೆ ಮಾಡುವುದಿಲ್ಲ—'ಆಸ್ಪ್ರೋ'ವನ್ನು ಯಾವ ಸಮಯದಲ್ಲಿಯೇ ಆಗಲಿ, ನೀರಿನಲ್ಲಾಗಲೀ, ಜಾಮ್‌ನಲ್ಲಾಗಲೀ, ಅಥವಾ ಹಾಲಿನಲ್ಲಾಗಲೀ ತೆಗೆದುಕೊಳ್ಳಬಹುದು. ಜಾಮ್‌ನಲ್ಲಿ ತೆಗೆದುಕೊಳ್ಳಬೇಕಾದಾಗ ಪುಡಿಮಾಡಿ ತೆಗೆದುಕೊಳ್ಳಿ.
೩ಮಾತ್ರೆಗಳಿಗೆ ಆಣೆ ೧. ೩೦ಮಾತ್ರೆಗಳಿಗೆ ಆಣೆ ೧೦
ಅವಾಯಕಾರಕ ಮೂಲಿಕೆಗಳನ್ನು ಸೇವಿಸಬೇಡಿ ನೋವು ಮತ್ತು ಜ್ವರನಿಲ್ಲುವುದಕ್ಕೆ 'ಆಸ್ಪ್ರೋ' ತೆಗೆದುಕೊಳ್ಳಿ
ಒಂದು ಮಗು ಕೂಡ 'ಆಸ್ಪ್ರೋ'ವನ್ನು ಕೆಡುಕಿಲ್ಲದೆ ಸೇವಿಸಬಹುದು.
ಹಂಚುವವರು:—
ಜೆ. ಎಲ್. ಮಾರಿಸನ್ ಅಂಡ್ ಜೋನ್ಸ್ (ಇಂಡಿಯಾ) ಲಿ;
ಪಿ.ಬಿ. ಬಾಕ್ಸ್ ೧೩೭೦ ಮದ್ರಾಸು.
(ಫೋನ್ ೪೧೨೬)
ಮತ್ತು ಶಾಖೆಗಳು
ಎಲ್ಲೆಲ್ಲೂ ಮಾರುತ್ತೆ
A.KW 8109

ಒಬ್ಬನ ಕುರಿತು ೪೦,೦೦೦ ಪುಸ್ತಕಗಳು!

ಬಹಳ ಧನಿಕನೊಬ್ಬ ಒಮ್ಮೆ ಒಂದು ದೊಡ್ಡ ಬಂಗಲೆಯನ್ನು ಕ್ರಯಕ್ಕೆ ಪಡೆದು ಕೊಂಡು, ಅದನ್ನು ಅತ್ಯುಚ್ಚವಾಗಿ ಅಲಂಕರಿಸಬೇಕೆಂದು ನಿರ್ಧಾರ ಮಾಡಿದ. ಆ ಬಂಗಲೆಯಲ್ಲಿ ಲೈಬ್ರರಿಗಾಗಿ ಉಪಯೋಗಿಸುವಂತಹ ಒಂದು ವಿಶಾಲವಾದ ಕೋಣೆಯಿತ್ತು.

ಗ್ರಂಥ ಭಂಡಾರ

"ಈ ಕೋಣೆಯನ್ನು ಶೃಂಗರಿಸುವು ದಕ್ಕಾಗಿ ಸ್ವಲ್ಪ ಪುಸ್ತಕಗಳನ್ನು ಕೊಂಡು ಕೊಳ್ಳಬೇಕು," ಎಂದು ಆ ಧನಿಕನು ಹೇಳಿದನು.

"ಸರಿ, ಸರಿ; ಅದೇ ಸರಿಯಾದ ಮಾರ್ಗ" ಎಂದು ಚೇಲ ಪ್ರೋತ್ಸಾಹ ವಿತ್ತ.....

"ಅಂಗಡಿಗಳಲ್ಲಿ ಚಿನ್ನದ ಅಂಚು ಗಳನ್ನು ಹಾಕಿದಂತಹ ಬೃಹದ್ ಗ್ರಂಥ ಗಳು ಖಂಡಿತ ಸಿಗುವುವು; ಹೋಗಿ ನೋಡು" ಎಂದು ಅನುಜ್ಞೆಯಾಯಿತು.

ಚೇಲ ಧೈರ್ಯ ತಂದುಕೊಂಡು ಹೇಳಿದ "ಎಂತಹ ಪುಸ್ತಕಗಳನ್ನು ತರಲಿ? ಒಬ್ಬೊಬ್ಬರು, ಒಂದೊಂದೇ ವಿಷಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಒಟ್ಟು ಕೂಡಿಸುತ್ತಾರೆ. ನಾವು ಯಾವುದರ ಕುರಿತು ಪುಸ್ತಕಗಳನ್ನು ಸಂಗ್ರಹಿಸೋಣ?"

ಧನಿಕ ಕತೆಗಾರಂಭಿಸಿದ "ನೋಡು ನಾನು ಮಾರ್ಕೆಟಿಗೆ ಹೋಗಿದ್ದು, ಅಲ್ಲಿಯ ಎಲ್ಲಾ ವಸ್ತುಗಳನ್ನು ಖರೀದಿ ಮಾಡಿದಾಗ, ನನ್ನನ್ನು 'ಸಂಪತ್ತಿನ ನೆಪೋಲಿಯನ್' ಎಂದು ಕೆಲವರು ಕರೆದರು. ಹಾಗೆ ಹೇಳಿದರು. ಯಾರಯ್ಯಾ? ಈ ನೆಪೋಲಿಯನ್ ಅಂದರೆ?—"

"ನೆಪೋಲಿಯನ್ನೇ? ಮೊದಲು ಬರಿಯ ಯೋಧನಾಗಿದ್ದು ಬಳಿಕ ಫ್ರಾನ್ಸಿನ ಸರ್ವಾಧಿಕಾರಿಯಾದವನು ಅವನು."

"ಓಹೋ! ಸರಿ; ಸರಿ! ಅವನ ಕುರಿತು ಬರೆಯಲ್ಪಟ್ಟಿರುವ ಎಲ್ಲಾ ಪುಸ್ತಕಗಳನ್ನು ಒಂದುಗೂಡಿಸಿ, ಅವು ಗಳಿಗೆ ಅತಿ ಉತ್ತಮವಾಗಿ ಬೈಂಡ್ ಮಾಡಿಸಿಬಿಡು."

ಸಂಗ್ರಹಕಾರ್ಯ

ಒಂದು ದೊಡ್ಡ ಪುಸ್ತಕ ಕಂಪೆನಿ ಯವರು, ಈ ಆರ್ಡರನ್ನು ಸ್ವೀಕರಿಸಿ ದರು. ಯೂರೋಪಿನ ಎಲ್ಲಾ ಭಾಷೆ ಗಳಲ್ಲಿ ನೆಪೋಲಿಯನ್ನಿನ ಕುರಿತು ಬರೆ ದಿದ್ದ ಎಲ್ಲಾ ಪುಸ್ತಕಗಳನ್ನೂ ಆ ಕಂಪೆನಿ ಸಂಗ್ರಹಿಸತೊಡಗಿತು. ದಿನಗಳು ಕಳೆ ದುವು; ಮಾಸಗಳು ಉರುಳಿದುವು.

ಮೂರು ತಿಂಗಳುಗಳ ಬಳಿಕ, ಆ ಧನಿಕ ಮಹಾಶಯನಿಗೆ, ಪುಸ್ತಕದ ಕಂಪೆ ನಿಯವರಿಂದ ಒಂದು ಪತ್ರ ಬಂತು.

"ನಿಮ್ಮ ಆಪ್ಪಣೆಯಂತೆ, ನೆಪೋ ಲಿಯನನ ಕುರಿತು ಬರೆಯಲ್ಪಟ್ಟಿರುವ ೪೦,೦೦೦ ಪುಸ್ತಕಗಳನ್ನು, ಈ ತನಕ ಸಂಗ್ರಹಿಸಿರುವೆವು. ಅವುಗಳನ್ನು ಇಲ್ಲಿ ಇಟ್ಟುಕೊಳ್ಳುವುದಕ್ಕೆ ಸ್ಥಳವಿಲ್ಲ. ದಯ ವಿಟ್ಟು ಕೊಂಡುಹೋಗುತ್ತೀರಾ? ನಾವು ಸಂಗ್ರಹದ ಕಾರ್ಯವನ್ನು ಮೊದಲು ಮುಗಿಸಬೇಕೆಂದಾದರೆ, ಹಾಗೆ ತಿಳಿ ಸಿರಿ...." ಎಂದಿತ್ತು ಅದರಲ್ಲಿ.

ಮುಂದೇನಾಯಿತೋ ತಿಳಿದುಬರು ವುದಿಲ್ಲ. ಆದರೆ, ಇದಿಷ್ಟು ನಿಜ. ಒಬ್ಬ ವ್ಯಕ್ತಿಯ ಕುರಿತು, ಪುಸ್ತಕಗಳನ್ನು ಸಂಗ್ರಹಿಸುವುದಕ್ಕೆ ಒಂದು ಕಂಪೆನಿಗೆ ಆರ್ಡರು ಹೋದುದೂ ನಿಜ; ಅವರು ೪೦,೦೦೦ದಷ್ಟು ಪುಸ್ತಕಗಳನ್ನು ಮೊದಲ ಬಾರಿಗೆ ಸಂಗ್ರಹಿಸಿದುದೂ ನಿಜ.

ನೆಪೋಲಿಯನನ ಕುರಿತು

೧೫೦ ವರ್ಷಗಳಿಂದೀಚೆಗೆ ಪುಸ್ತಕ ಗಳನ್ನು ಜನರು ಬರೆಯುತ್ತಲೇ ಇದ್ದಾರೆ. ಅಂದರೆ ನೆಪೋಲಿಯನ್ ಕೀರ್ತಿಗೆ ಬಂದ ವರ್ಷದ ಮೊದಲ್ಗೊಂಡು, ಪ್ರತಿ ವರ್ಷವೂ ೨೫೦ ಪುಸ್ತಕಗಳು ಅವನ ಕುರಿತು ಬರೆಯಲ್ಪಡುತ್ತಿವೆ.

ಅವನ ಕುರಿತು ಪುಸ್ತಕಗಳನ್ನು ಬರೆ ಯದ ದೇಶವಾವುದು? ಇಂಗ್ಲೆಂಡೆ? ಫ್ರಾನ್ಸೆ? ಈ ಎರಡು-ರಾಷ್ಟ್ರಗಳಷ್ಟೇ ಪ್ರತಿ ವರ್ಷ ೧೫೦ ಪುಸ್ತಕಗಳನ್ನು ಬರೆ ಯುತ್ತಾ ಬಂದಿವೆ ಎಂದರೂ ಸರಿ ಹೋಗುವುದು.

ತಡೆಯಿರಿ! ಈ ಮಹಾಶಯನ ವಿಷಯದಲ್ಲಿ ಇಟಲಿಗೆ ಆಸಕ್ತಿ ಇಲ್ಲ ವೇನು? ಸ್ಪೆಯಿನಿಗೊ? ಸ್ಪೈನು ಅವನ ಕುರಿತು ಹೆಚ್ಚೆಚ್ಚು ಬರೆಯುತ್ತಿರಲೇ ಬೇಕು. ಕಾರಣ,—ಸ್ಪೆಯಿನನ್ನು ಆಕ್ರ ಮಿಸಿದುದರಿಂದಾಗಿ, ಅಲ್ಲಿನ ಜನತೆಯಲ್ಲಿ ಒಗ್ಗಟ್ಟನ್ನುಂಟುಮಾಡಿ, ಅವರಲ್ಲಿ ರಾಷ್ಟ್ರೀಯ ಭಾವನೆಯನ್ನು ಬಿತ್ತಿದವನೇ ನೆಪೋಲಿಯನ್!

ಜರ್ಮನಿಗೂ ನೆಪೋಲಿಯನನ ಕುರಿತು ಹೆಚ್ಚು ಹೇಳುವುದಕ್ಕಿದೆ. ಬೆಲ್ಜಿಯಂ-ಹೊಲ್ಲೆಂಡುಗಳಿಗೂ ಹಾಗೆ ಯೇ. ಪೋಲೆಂಡನ್ನು ಸ್ವತಂತ್ರಗೊಳಿ ಸುವುದಕ್ಕೆ ನೆಪೋಲಿಯನ್ ದುಡಿದಿದ್ದ ನಾದುದರಿಂದ, ಪೋಲರ ಸ್ಮೃತಿಪಥ ದಿಂದ ನೆಪೋಲಿಯನ್ ಅಳಿಸಿಹೋಗು ವಂತೆಯೇ ಇಲ್ಲ!

ಇದರಿಂದ ತಿಳಿಯುವುದೇನೆಂದರೆ, ಇಂಗ್ಲಿಷರಷ್ಟೇ ನೆಪೋಲಿಯನ್ನನ ಕುರಿತು ಬರೆದವರಲ್ಲ. ಬೇರೆ ಮಂದಿಯೂ ಇದ್ದಾರೆ. ವರ್ಷಕ್ಕೆ ೧೫೦ ಪುಸ್ತಕಗಳಿ ಗಿಂತ ಕಮ್ಮಿಯಾಗಿ ಅವರು ಬರೆದಿದ್ದರೂ ಇರಬಹುದು.

೪೦,೦೦೦

ಅವನ ಕುರಿತಾದ ಗ್ರಂಥಗಳನ್ನು, ಚಿಕ್ಕ ಚಿಕ್ಕ ಪ್ರಕಟಣೆಗಳನ್ನು, ಪತ್ರಿಕೆ ಗಳಲ್ಲಿನ ಲೇಖನಗಳನ್ನು ಇವೆಲ್ಲವನ್ನು ಒಟ್ಟು ಸೇರಿಸಿದಾಗ, ೪೦,೦೦೦ ಪುಸ್ತಕ ಗಳನ್ನು ಬರೆಯಲು ಶಕ್ತವಾದ ಈ ರಾಷ್ಟ್ರ ಗಳೆಲ್ಲ ಅಭಿನಂದನಾರ್ಹವಾಗಿ ತೋರು ತ್ತವೆ.

ನೆಪೋಲಿಯನ್ ರಕ್ತಪಾತವನ್ನು ಮಾತ್ರವಲ್ಲ; ಶಾಯಿಯ ಪಾತವನ್ನೂ ಮಾಡಿದಂತಿದೆ!

ಸುಖಪ್ರಸವವನ್ನು ನಿರೀಕ್ಷಿಸುವ ತಾಯಿಯರೇ ಇದನ್ನು ಓದಿರಿ.



ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ನಿಮ್ಮ ಗರ್ಭಕಾಲದಲ್ಲಿ ನಿಮಗೆ ಸಹಕಾರಿಯಾಗುವುದು.

ಗರ್ಭಿಣಿಯರು ಬೆಳಗಿನಜಾವದ ವಾಂತಿ, (ಬಯಕೆ) ಆಹಾರದಲ್ಲಿ ಅನಾದರಣೆ, ಮಲಬದ್ಧತೆ ಮತ್ತು ಪಿತ್ತಸಂಕಟ ಇವುಗಳಿಂದ ಕಷ್ಟಪಡುತ್ತಾರೆ. ಅವರ ಹಲ್ಲುಗಳು ಬೇಗ ಸವೆದುಹೋಗುತ್ತವೆ. ಈ ಬಾಧೆಗಳೆಲ್ಲಾ, ನಿಮ್ಮ ವೈದ್ಯರೇ ನಿಮಗೆ ಹೇಳುವಪ್ರಕಾರ, ಗರ್ಭದಲ್ಲಿರುವ ಶಿಶುವಿನ ಪೋಷಣೆಗೆ ಬೇಕಾದಸಾಮಗ್ರಿಗಳನ್ನು ತಾಯಿಯ ದೇಹವು ಒದಗಿಸಿ ಕೊಡಬೇಕಾದ ಹೆಚ್ಚಾಗಿ ಉತ್ಪತ್ತಿಯಾಗುವ ಆಮ್ಲ (ಹುಳಿ) ರಸದಿಂದ ಉಂಟಾಗುತ್ತವೆ.

ಈ ಸ್ಥಿತಿಯನ್ನು ತಿದ್ದುವುದಕ್ಕೆ ಅತ್ಯಂತ ಫಲಕಾರಿಯಾದ ದಾರಿ ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನು ತೆಗೆದುಕೊಳ್ಳುವುದೇ. ಇದು ಹೊಟ್ಟೆಯಲ್ಲಿ ಉತ್ಪತ್ತಿಯಾದ ಅನಾವಶ್ಯವಾದ ಆಮ್ಲರಸವನ್ನು ನಿಸ್ಸಾರಪಡಿಸುತ್ತದೆ. ಆದರೆ ಹೊಟ್ಟೆ ಉಬ್ಬರವುಂಟುಮಾಡುವ ವಾಯುವನ್ನು ಉತ್ಪತ್ತಿಮಾಡುವುದಿಲ್ಲ. ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾ ಕರುಳುಗಳನ್ನು, ಅನಾನುಕೂಲ ಅಥವಾ ಹೊಟ್ಟೆ ಹಿಡಿತವುಂಟುಮಾಡದೆಯೂ ನಿಧಾನವಾಗಿಯೂ ಖಂಡಿತವಾಗಿಯೂ ಕ್ರಮಪಡಿಸುವುದು. ಅಲ್ಲದೆ ಹೊಟ್ಟೆಯನ್ನು ಶುದ್ಧವಾಗಿಯೂ ಹಗುರವಾಗಿಯೂ ಇಟ್ಟಿರುತ್ತದೆ. ದೇಹದ ಎಲ್ಲಾ ಭಾಗಗಳಿಗೂ ಶಕ್ತಿಯನ್ನುಂಟುಮಾಡುತ್ತದೆ.

ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವಿನಿಂದ ಕ್ರಮವಾಗಿ ಬಾಯನ್ನು ತೊಳೆದುಕೊಳ್ಳುವುದಾದರೆ, ಬಾಯಲ್ಲಿ ಉತ್ಪತ್ತಿಯಾಗಿ ಹಲ್ಲುಗಳನ್ನು ನಾಶಮಾಡತಕ್ಕ ಹುಳಿ ರಸಗಳನ್ನು ಆದು ನಿಸ್ಸಾರಪಡಿಸಿ ಹಲ್ಲುಗಳನ್ನು ಕಾಪಾಡುತ್ತದೆ. ತೀಕ್ಷ್ಣವಾಗಿಯೂ, ನಿಶ್ಚಯವಾಗಿಯೂ ಕೆಲಸಮಾಡುವುದರಿಂದ ತಾಯಿಗೂ ಮತ್ತು ಮಗುವಿಗೂ ಆದು ಪೂರ್ಣವಾಗಿಯೂ ಸುರಕ್ಷಿತವಾದದ್ದು. ಫಿಲ್ಲಿಪ್ಸ್ ಮಿಲ್ಕ್ ಆಫ್ ಮ್ಯಾಗ್ನೀಷಿಯಾವನ್ನು ಉಪಯೋಗಿಸಿ ನಿಮ್ಮ ಆರೋಗ್ಯವನ್ನೂ ನೀವು ನಿರೀಕ್ಷಿಸುತ್ತಿರುವ ಮಗುವಿನ ಆರೋಗ್ಯವನ್ನೂ ದೃಢಪಡಿಸಿಕೊಳ್ಳಿರಿ.

ಫಿಲ್ಲಿಪ್ಸ್

ಮಿಲ್ಕ್ ಆಫ್ ಮ್ಯಾಗ್ನೀಷಿಯಾ

ಆಮ್ಲನಿವಾರಣೆಮಾಡುವ ಮಲವಿಸರ್ಜನ ಸಹಕಾರಿ.

ಫಿಲ್ಲಿಪ್ಸ್ ಬಿಲ್ಲೆಗಳರೂಪದಲ್ಲಿಯೂ ಸಿಕ್ಕುತ್ತವೆ. ಈ ಬಿಲ್ಲೆಗಳು ಗರ್ಭಿಣಿಯರಿಗೆ ಮುಖ್ಯವಾಗಿ ಹಿತಕರವಾದುವು. ಯಾಕೆಂದರೆ ಬೆಳಗ್ಗೆ ಹಾಸಿಕೆಯಿಂದ ಏಳುವು ದಕ್ಕೆಮುಂಚೆ ಬಾಯಲ್ಲಿ ಬಿಲ್ಲೆಗಳನ್ನು ಇಟ್ಟುಕ್ಕೊಂಡು ನಿಧಾನವಾಗಿಚಪ್ಪರಿಸಿ ಕರಗಿಸಿದರೆ ಅವು ವಾಂತಿಯನ್ನೂ ಪಿತ್ತಸಂಕಟವನ್ನೂ ಪರಿಹಾರಮಾಡುವುವು.

M2V

THE BANK OF MANGALORE LTD., MANGALORE

Balance Sheet as at 30th June 1941

CAPITAL & LIABILITIES					
Paid-up Capital	—	—	—	20,865	0 0
General & Contingent Reserves	—	—	—	5,900	0 0
Income-tax Reserve	—	—	—	1,350	1 0
Due to Bankers				nil	
Deposits	—	—	—	1,32,152	8 3
Bills for Collections	—	—	—	21,574	1 2
Sundries including Profits	—	—	—	3,232	1 11
				1,85,073	12 4
PROPERTY & ASSETS					
Furniture & Safes	—	—	—	1,400	0 0
Authorised Investments	—	—	—	1,16,164	6 10
Investment on Govt. Securities			—	7,854	0 0
Fixed Deposit with a Scheduled Bank			—	10,000	0 0
Bills per Contra	—	—	—	21,574	1 2
Sundries	—	—	—	3,585	3 0
Cash-in-hand & with Bankers at Call			—	24,496	1 4
				1,85,073	12 4

ಪ್ರಪಂಚದ ಪಾನಿಪತ್ತು

ಬಲ್ಗೇರಿಯ ಯುದ್ಧಕ್ಕಿಳಿಯುವುದೇ?

ಬಲ್ಗೇರಿಯ ಯುದ್ಧಕ್ಕಿಳಿಯ ಬೇಕೆಂದು ಹಿಟ್ಲರ್ ಅದನ್ನು ಒತ್ತಾಯ ಪಡಿಸುತ್ತಿರುವುದನ್ನು ನಾವು ಹಲವು ದಿನಗಳಿಂದ ಕೇಳುತ್ತಿದ್ದೇನೆ. ಟರ್ಕಿ ಬಲ್ಗೇರಿಯದ ಚಲನವಲನಗಳನ್ನು ಆಸಕ್ತಿ ವಹಿಸಿ ಕಾದುಕೊಂಡಿದೆ. ಈಚಿಗಿನ ವಾರ್ತೆಗಳ ಮೇರೆಗೆ, ಬಲ್ಗೇರಿಯದಲ್ಲಿ ಯುದ್ಧಸಿದ್ಧತೆಗಳೂ ಜರ್ಮನರ ಪರವಾದ ಕಾರ್ಯ ಕಲಾಪಗಳೂ ಧಾರಾಳವಾಗಿ ಕಾಣ ಬರುತ್ತಿದ್ದು, ಈಚಿಗೆ ದೊಡ್ಡ ಎಮಾನ ನಿಲ್ದಾಣವಾಗಿ ಏರ್ಪಟ್ಟ ಯಂಬೋಲ ದಿಂದ ಮುಸ್ಲಿಂ ಜನತೆಯೂ ಒಕ್ಕಲು ತೆಗೆದಿದೆ.

ಕೆಲ ಕಾಲದ ಹಿಂದೆ, ಬಲ್ಗೇರಿಯವು ಯುಗೋಸ್ಲಾವಿಯಾ, ಗ್ರೀಸುಗಳಿಂದ ತನಗೆ ಸಿಕ್ಕಿದ ಪಾಲಿನಿಂದಷ್ಟೇ ತೃಪ್ತವಾಗಿ, ರಷ್ಯದ ಮೇಲೆ ತಾನು ಯುದ್ಧಕ್ಕೆ ಹೊರಡುವುದಿಲ್ಲವೆನ್ನುತ್ತಿದ್ದರೂ, ಈಗ "ರಷ್ಯದ ಪೆರಜೂಟ್ ಸೇನೆಗಳು ತಮ್ಮಲ್ಲಿ ಇಳಿದಿವೆ, ರಷ್ಯದ ಸಬ್‌ಮೆರೈನ್‌ಗಳು ಬಲ್ಗೇರಿಯದ ಹಡಗುಗಳನ್ನು ಮುಳುಗಿಸಿವೆ" ಎಂಬ ನೆವನ ಹೂಡಿ, ರಷ್ಯದ ವಿರುದ್ಧ ಸಂಗ್ರಾಮ ಹೂಡಲು ಪೀಠಿಕೆ ಹಾಕಿದೆ. ಬಲ್ಗೇರಿಯದ ಈ ಹೊಸ ಬದಲಾವಣೆ ಕೇವಲ ಅಕಸ್ಮಾತಾದುದು! ಈಚಿಗಿನದು.

ಆದರೆ, ಬಲ್ಗೇರಿಯದ ಈ ಬದಲಾವಣೆಗೆ ಕಾರಣಗಳಿವೆ. ಜರ್ಮನಿಯ "ಗಣ"ಗಳಾದ ರುಮೇನಿಯಾ ಹಂಗೆರಿಗಳ ಒತ್ತಾಯವೇ ಅದಕ್ಕೆ ಮೂಲ. ಅವೆರಡು ರಾಷ್ಟ್ರಗಳೂ ತಾವು ಈ ಯುದ್ಧದಲ್ಲಿ ಭಾಗಿಗಳಾಗಿ, ಅದರ ನಷ್ಟ ಕಷ್ಟಗಳನ್ನು ಸಹಿಸುತ್ತಿರುವಾಗ, ಯುದ್ಧದ ಕೊಳ್ಳೆಯಾಗಿ ದೊಡ್ಡ ಲಾಭವನ್ನೇ ಸಂಪಾದಿಸಿದ ಬಲ್ಗೇರಿಯ ಮಾತ್ರ, ತನ್ನ ಕೆರುಬೆರಳನ್ನೂ ಎತ್ತದೆ, ಸುಮ್ಮನಿರಬೇಕೇ? ತಾವು ರಷ್ಯದ ಯುದ್ಧದಲ್ಲಿ ಕಷ್ಟಪಡಬೇಕು, ಬಲ್ಗೇರಿಯ ಮಾತ್ರ ಸುಖ ಪಡಬೇಕೆ? ಎಂಬುದು ಅವುಗಳ ವಾದ. ಆ ವಾದದಿಂದ ಹಿಟ್ಲರನ ತಲೆಯೂ ತಿರುಗಿ, ಬಲ್ಗೇರಿಯವೂ ಈ ಯುದ್ಧದಲ್ಲಿ ಜವಾಬುದಾರಿ ವಹಿಸಲೇ ಬೇಕು ಎಂದು ಒತ್ತಾಯ ಪಡಿಸುತ್ತಿದ್ದಾನೆ.

ಈಗಿನ ಸಂದರ್ಭಗಳಲ್ಲಿ ಬಲ್ಗೇರಿಯ ರಷ್ಯದ ವಿರುದ್ಧ ಯುದ್ಧ ಹೂಡುವುದು ಕೆಲವು ದಿನಗಳ ಮಾತೆಂದು ತೋರುತ್ತದೆ! ಪ್ರಪಂಚದ ಪಾನಿಪತ್ತು ಇನ್ನೂ ಯಾರ್ಯಾರನ್ನು ಸೆಳೆದುಕೊಳ್ಳುವುದೋ!

ಪೂರ್ವ ದೇಶಗಳಲ್ಲಿ ಜಪಾನಿನ "ಮರ್ಜಿ"

ಆಗಲೇ ಚೀನಾದಲ್ಲೊಂದು ಕುರುಕ್ಷೇತ್ರವನ್ನು ನಿರ್ಮಿಸಿರುವ ಜಪಾನು ಪೂರ್ವ ದೇಶದಲ್ಲಿ ಏನು ಮಾಡಲಿದೆ?—ಈ ಪ್ರಶ್ನೆ ಬಹು ಕಾಲದಿಂದ ಕೇಳಿಬರುತ್ತಿದೆ. ಆದರೆ ಅದಕ್ಕಿನ್ನೂ ಸರಿಯಾದ ಉತ್ತರ ಸಿಕ್ಕಿಲ್ಲ! "ನೆನ್ನೆನಿನ್ನೇನು?" ಎಂಬ ಪಲ್ಲವಿಯಲ್ಲಿಯೇ ಉಳಿದಿದೆ.

ಜಪಾನು ಈಗಲೂ ರಷ್ಯಾ ಯುದ್ಧದ ಪರಿಣಾಮವನ್ನೇ, ಹಿಂದಿನಂತೆಯೇ ನಿರೀಕ್ಷಿಸಿ ಕುಳಿತಿದೆ. ರಷ್ಯದವರ ಪ್ರತಿಭಟನೆ ಮುಂದೆಯೂ ಜೋರಾಗಿದ್ದರೆ, ಜಪಾನು ಆಗ ಚಳಿಗಾಲದಲ್ಲಿ ವ್ಲಾಡಿವೊಸ್ಟಾಕಿನ ಮೇಲೆ ಕೈವಾಡದೆಂಬುದು ಖಂಡಿತ. ಹಿಟ್ಲರನೇನೋ ಪೂರ್ವ ಸೈಬೀರಿಯವನ್ನು, ಜಪಾನು ಆಕ್ರಮಿಸಬೇಕೆಂದು ಆತುರಗೊಂಡಿರುವುದು ನಿಜವಾದರೂ ರಷ್ಯದವರು ಅಲ್ಲಿ ಬಲವಾದ ಸೇನೆಗಳನ್ನು ಇರಿಸಿಕೊಂಡಿರುವಷ್ಟು ಕಾಲ, ಜಪಾನು ವ್ಲಾಡಿವೋಸ್ಟಾಕಿನ ಕ್ಷೇತ್ರದಲ್ಲಿ ಬಾಲವನ್ನಾಡಿಸಲು, ರಷ್ಯದ ಮೇಲೆ ಬೀಳಲು ಧೈರ್ಯಗೊಳ್ಳದು. ಅಲ್ಲದೆ ಜಪಾನಿಗೆ ಸಾಲದ ಸೌಕರ್ಯಗಳು ಕಡಿಮೆಯಾಗಿ ಎಣ್ಣೆ ಸರಬರಾಯಿ ತಗ್ಗಿಯೂ ಇರುವುದರಿಂದ ಜಪಾನಿನ ಮುತ್ಸದ್ದಿಗಳು ಏನು ಮಾಡುವುದೆಂದು ದೊಡ್ಡ ಗೊಂದಲದಲ್ಲಿ ಬಿದ್ದಿದ್ದಾರೆ!

೪ ವರ್ಷಗಳಿಂದ ನಡೆಯುತ್ತಿರುವ ಚೀನಾ ಕಾಳಗವನ್ನೂ ಮುಗಿದಿಲ್ಲ; ಪೂರ್ವ ದೇಶಗಳ ರಕ್ಷಣಾಕಾರ್ಯಗಳನ್ನು ಬ್ರಿಟಿಷರೂ ಬಲಪಡಿಸುತ್ತಲೇ ಇದ್ದಾರೆ. ರಷ್ಯದಲ್ಲಿ ಹಿಟ್ಲರನ ಜಯಾಪಜಯಗಳಿನ್ನೂ ನಿರ್ಧಾರವಾಗಿಲ್ಲ. ಇಂಥ ಸಂದಿಗ್ಧಾವಸ್ಥೆಯಲ್ಲಿ ಜಪಾನ್ ರಷ್ಯದ ಮೇಲೆ ಬಿದ್ದರೆ ಸಾಕೇ? ಅದನ್ನು ಪೂರೈಸಿಕೊಳ್ಳುವ ಸಾಮರ್ಥ್ಯ ಜಪಾನಿಗೆ ಬೇಡವೇ?

NOTICE

In the Court of the Subordinate Judge of South Kanara.

S. C. No. 105 of 1941

Between

Mrs. Mary D'Souza— **Plaintiff**

and

1. Paramesri Hengsu
2. Kamala Hengsu } **Defendants.**

Notice to defendants:—(1) Paramesri Hengsu, daughter of Povakke Hengsu and (2) Kamala Hengsu, daughter of Mammakke Hengsu, both residing at Thendelthota of Kankanady village, Mangalore Taluq, is hereby given that the plaintiff has filed the above suit against them for the recovery of the sum of Rs. 351—0—4 being the arrears of Chalgeni-rental due for the 3 years ended March 1941 and that the 15th day of October 1941 has been appointed for final disposal of the said suit. Please take notice that, in default of their appearance on the day before mentioned, the suit will be heard and determined in their absence.

(By Order of the Court).

J. Gonsalves,
Vakil for Plaintiff.

Mangalore, Dated 25—9—1941.

ಕೊಳೆಯಲ್ಲಿ ಯಾವಾಗಲೂ ಅಪಾಯವಿದೆ. ಕ್ರಿಮಿನಾಶಕ ಲೈಫ್‌ಬಾಯ್ ಕುಟುಂಬವನ್ನು ಸಂರಕ್ಷಿಸುತ್ತದೆ.

ಕೆಲಸಮಾಡುವ ತಂದೆಯರು—ಆಡುವ ಮಕ್ಕಳು—ಅಡಿಗೆ ಕೋಣೆಯಲ್ಲಿ ತಾಯಂದಿರು—ಎಲ್ಲರೂ ಕೊಳೆಯ ಅಪಾಯಕ್ಕೆ ಗುರಿಯಾಗಿರುವರು. ಎಲ್ಲಾ ಕೊಳೆಯಲ್ಲಿಯೂ ಕ್ರಿಮಿಗಳು ತುಂಬಿಕೊಂಡಿವೆ—ಕ್ರಿಮಿಗಳು ಕಡಿತಗಳನ್ನು ಕೊಳೆಯುವಂತೆಯೂ ಗಾಯಗಳನ್ನು ಅಪಾಯಕರವಾಗುವಂತೆಯೂ ಮಾಡುವಂಥವುಗಳು. ಕ್ರಿಮಿಗಳ ಈ ಅಪಾಯದಿಂದ ಲೈಫ್‌ಬಾಯ್ ಸೋಪು ನಿಮ್ಮ ಕುಟುಂಬವನ್ನು ರಕ್ಷಿಸಲಿ. ಲೈಫ್‌ಬಾಯ್ ಕ್ರಿಮಿನಾಶಕವಾದ ಸೋಪು—ಅದರ ವಿಫುಲವಾದ ನೊರೆಯು ವಿಶೇಷ ಆರೋಗ್ಯ ಗುಣವುಳ್ಳದ್ದಾಗಿ ಅಂಟುರೋಗದಿಂದ ಕಾಪಾಡುತ್ತದೆ.

ಲೈಫ್‌ಬಾಯ್ ಸೋಪಿನಲ್ಲಿ ಸಮೃದ್ಧವಾದ ಕೋಮಲ ನೊರೆಯಿದ್ದು ನವಚೈತನ್ಯವನ್ನುಂಟುಮಾಡುತ್ತದೆ—ಮತ್ತು ಅದಕ್ಕೆ ಚರ್ಮವನ್ನು ಕಜ್ಜಿ ಮತ್ತು ಬೊಕ್ಕೆಗಳಿಂದ ರಕ್ಷಿಸುವ ಶಕ್ತಿಯಿದೆ. ಅದನ್ನು ಕುಟುಂಬದ ಆರೋಗ್ಯದ ಸೋಪನ್ನಾಗಿ ಮಾಡಿರಿ.—ಮತ್ತು ಅವರೆಲ್ಲರಿಗೂ ಅದನ್ನು ನಿತ್ಯವೂ ಉಪಯೋಗಿಸುವಂತೆ ಹೇಳಿರಿ!



ಲೈಫ್‌ಬಾಯ್ "ಒಳ್ಳೆಯ ಆರೋಗ್ಯದ" ಸೋಪು.

LEVER BROTHERS (INDIA) LIMITED L 23—169 KN

ಆದುದರಿಂದಲೇ, ಜಪಾನು ಹೊತ್ತು ಕಳೆಯಲಿಕ್ಕಾಗಿ, ರಷ್ಯದವರ ನಿಜವಾದ ಶಕ್ತಿ ಪರೀಕ್ಷೆಯಾಗುವ ವರೆಗೆ, "ಅಮೆರಿಕದೊಡನೆ ಮಾತುಕತೆ" ಎಂಬ ಹರಿಕಥೆ ಗಾರಂಭಿಸಿದೆ. ಅಮೆರಿಕವೂ ಪೂರ್ವ ದೇಶಗಳಲ್ಲಿ ತಾನೂ ಮಿತ್ರರೂ ಸಂಪೂರ್ಣ ಬಲಗೊಳ್ಳುವ ವರೆಗೆ, ಈ ಹರಿಕಥಾ ಶ್ರವಣವನ್ನು ಮುಂದುವರಿಸಬಹುದಾಗಿದೆ. ಇವರಿಬ್ಬರಲ್ಲಿ ಯಾರು ಹೆಚ್ಚು ಬುದ್ಧಿವಂತರೆಂಬುದನ್ನು ತಿಳಿಯುವುದು ಕಷ್ಟ. ಮುಂದೆ [illegible] ಯನ್ನು ಹೆತ್ತರೆ, 'ಜೋಗಿಯನ್ನು ಜೋಗಿ' ಯಪ್ಪಿಕೊಂಡ 'ಬೂದಿಯ ಮಹಾತ್ಮೆ'ಯ ಹರಿಕಥೆಯೇ ಇದೆಂದು ಜಗತ್ತಿಗೆ ತಿಳಿಯದಿರದು. ಆದರೆ ಇಂದಿನ ಯುದ್ಧಕಾಂಡದ ರಾಜನೀತಿಯಲ್ಲಿ, ಇಂಥ ಎಷ್ಟೋ ಅಧ್ಯಾಯಗಳನ್ನು ಹಿಂದೆ ನಾವು ನೋಡಿದ್ದೇವೆ. ಆದಕಾರಣ ಅಮೆರಿಕಕ್ಕೆ ತೆರಳಿದ ಜಪಾನೀಯರು ಅಲ್ಲೇನೂ ಸಾಗಲಿಲ್ಲವೆಂದು ಆಷಾಢಭೂತಿಯನಿಟ್ಟುಸಿರು ಬಿಡುತ್ತ ಮರಳಿದರೆ, ಆಶ್ಚರ್ಯವೇನೂ ಇಲ್ಲ. ಅನಂತರ ಜಪಾನಿನ ಕಥೆ ಜಪಾನಿಗೇ ಗೊತ್ತು.

ಮೃತ್ಯುವಿನ ದವಡೆಯಿಂದ ಪಾರಾದವರು

ಅವರ ಹೇಳಿಕೆ ಏನು?

[ನಾ ಜೀ ಜರ್ಮನಿಯಲ್ಲಾಗುತ್ತಿರುವ ಮರ್ದನ–ದಬ್ಬಾಳಿಕೆಗಳಿಗೆ ಮಿತಿಯಿಲ್ಲ. ಜರ್ಮನಿ, ಆಸ್ಟ್ರಿಯ, ಜಿಕೊಸ್ಲೊವೇಕಿಯ, ಪೋಲೆಂಡ್, ಇಟೆಲಿ ಮತ್ತು ಇತರ ರಾಷ್ಟ್ರಗಳಿಂದ ಫ್ಯಾಸಿಸ್ಟ್ ಪ್ರೇತದ ಕರಾಳನೃತ್ಯವನ್ನು ಕಂಡು ಬೆದರಿ, ಆ ನಾಡುಗಳನ್ನು ತ್ಯಜಿಸಿ, ದೂರ ದೇಶಗಳಿಗೆ ಲೆಕ್ಕ ವಿಲ್ಲದಷ್ಟು ಮಂದಿ ಅನುದಿನವೂ ಓಡಿ ಹೋಗುತ್ತಿದ್ದಾರೆ. ಹಾಗೆ ರಕ್ಷಣಾರ್ಥಿಗಳಾಗಿ ಭಾರತಕ್ಕೆ ಬಂದವರೂ ಇದ್ದಾರೆ. ಅಂತಹ ಕೆಲ ಮಂದಿಯೊಡನೆ ಪತ್ರಿಕಾ ಪ್ರತಿನಿಧಿಯೊಬ್ಬರು ಸಂಭಾಷಿಸಿ, ಸಂಗ್ರಹಿಸಿದ ವಿಷಯಗಳನ್ನು ಇಲ್ಲಿ ಕೊಡಲಾಗಿದೆ.]

ವಿಯೆನ್ನಾದ ಹುಡುಗಿ

ಅವಳಿಗೆ ಇಪ್ಪತ್ತೊಂದು ವರ್ಷವೂ ಆಗಿರಲಿಲ್ಲ. ಇಂಗ್ಲಿಷನ್ನು ಚೆನ್ನಾಗಿ ಮಾತನಾಡುತ್ತಿದ್ದಳು. ಆ ಕುರಿತು ಅಭಿನಂದನೆಯನ್ನು ಅರ್ಪಿಸಿದಾಗ, ಅಭಿಮಾನದಿಂದ, ತನಗೆ ಫ್ರೆಂಚೂ ತಿಳಿದಿರುವುದಾಗಿ ಅವಳು ಹೇಳಿದಳು. ವಿಯೆನ್ನಾದಲ್ಲಿ ಶಾಲೆಗೆ ಹೋಗುತ್ತಿದ್ದಾಗ, ಈ ಭಾಷೆಗಳನ್ನು ಕಲಿತಿದ್ದಳಂತೆ. ಆದರೆ ಭಾರತಕ್ಕೆ ಓಡಿಬರುವ ಮೊದಲು, ಫ್ರಾನ್ಸ್–ಇಂಗ್ಲೆಂಡುಗಳಲ್ಲಿ ಸುತ್ತಾಡಿದ್ದರಿಂದಲೇ, ಅಷ್ಟು ಚೆನ್ನಾಗಿ ಮಾತನಾಡಲು ಶಕ್ತಳಾಗಿದ್ದಳು.

ನಾನು ಭೇಟಿಮಾಡಿದ ಇತರ ದೇಶಗಳ ಜನರಾರಿಗೂ–ಅವರ ಸಂಖ್ಯೆ ಇಪ್ಪತ್ತಕ್ಕೆ ಮಿಕ್ಕಿದೆ–ಇಂಗ್ಲಿಷ್ ಬರುತ್ತಿರಲಿಲ್ಲ. ಹೀಗಾಗಿ ಸನ್ನೆ–ನಟನೆಗಳ ಮೂಲಕವಾಗಿಯಷ್ಟೇ ಬಹುವಂಶ ಅವರೊಡನೆ ಮಾತನಾಡುವುದಕ್ಕೆ ನಾನು ಶಕ್ತನಾದೆ.

ಅವಳು ವ್ಯಾಪಾರಿಯೊಬ್ಬನ ಮಗಳು. ವಿಯೆನ್ನಾದಲ್ಲಿ ೧೫೩ರಲ್ಲಿ ಅವಳ ತಂದೆಗೆ ವ್ಯಾಪಾರವಿತ್ತು.

ವಿಯೆನ್ನಾನ್ನು ಜರ್ಮನರು ಪ್ರವೇಶಿಸಿದರು. ಅವಳ ಕುಟುಂಬದ ಸುಖ ಜೀವನ ಕೊನೆಗೊಂಡಿತು.

ಪ್ರೇಗ್—ರೋಮ್‌ಗಳಿಗೆ

ತಂದೆತಾಯಿ–ಅಕ್ಕ, ಈ ಮೂವರ ಜತೆಯಲ್ಲಿ ಅವಳು ಪ್ರೇಗಿಗೆ ಹೋದಳು. ಅವರಲ್ಲಿ ಕೊಂಚವಷ್ಟೇ ಹಣವಿತ್ತು. ಪ್ರೇಗೂ ಕೆಲ ದಿನಗಳಲ್ಲಿ ಜರ್ಮನರ ಹಸ್ತಗತವಾಗಿ, ಆ ನಗರವನ್ನೂ ಅವರಿಗೆ ಬಿಡಬೇಕಾಗಿ ಬಂತು.

ಅವರು ರೋಮಿಗೆ ಯೌತ್ರೆ ಬೆಳೆಸಿದರು.

ಜ್ಯೂಜನರ ಬೇಟೆ ಇಟೆಲಿಯಲ್ಲಿ ಆರಂಭವಾಗಿರಲಿಲ್ಲ. "ಇಲ್ಲಿಂದಲೂ ಹೊರಡಿರಿ" ಎಂದು ಯಾರೂ ಅವರನ್ನು ಕೇಳಲಿಲ್ಲ. ಆದರೂ ಜೀವನ ರೋಮಿನಲ್ಲಿ ದುಸ್ತರವಾಯಿತು. ಅಹರ್ನಿಶಿ ಗೆಸ್ಟಾಪೋದ ಜನರು,—ಜರ್ಮನಿಯ ಗುಪ್ತಚಾರರು,–ಅವರನ್ನು ಕಾದು ಕುಳಿತಿದ್ದರು.

ಕೊನೆಗೆ ಈ ನಿರ್ಧಾರವಾಯಿತು;–ಇಪ್ಪತ್ತರ ಕೆಳಗಿದ್ದ ಆ ಹುಡುಗಿಯರಿಬ್ಬರೂ ಇಂಗ್ಲೆಂಡಿಗೆ ಹೋಗಬೇಕೆಂದು, ಮತ್ತು ತಂದೆತಾಯಿಗಳು ಫ್ರಾನ್ಸಿಗೆ ಸಾಗಬೇಕೆಂದು.

ಪ್ರಣಯ ಪ್ರಸಂಗ

ಹುಡುಗಿಯರಿಗಿಬ್ಬರಿಗೂ ಲಂಡನಿನಲ್ಲಿ ದಾದಿಯರ ಕೆಲಸ ದೊರಕಿತು.

ಅವರ ತಾಯ್ತಂದೆಯರಿಗೆ? ಫ್ರಾನ್ಸು ಹಿಟ್ಲರನ ಪಾದಾಕ್ರಾಂತವಾಗಿ, ಗಂಡ ಹೆಂಡಿರಿಬ್ಬರೂ ಸೆರೆಮನೆ ಸೇರಿದರು!

ಇಟೆಲಿಯಲ್ಲಿರುವಾಗ, ಈ ಹುಡುಗಿ ಒಬ್ಬ ಜ್ಯೂ ಪ್ರಮುಖನನ್ನು ಪ್ರೀತಿಸತೊಡಗಿದ್ದಳು. ಮುಂಬಯಿಯ ಹೊಟೆಲೊಂದರಲ್ಲಿ ಕೆಲಸ ದೊರಕಲು ಆತ ಭಾರತಕ್ಕೆ ಬಂದಿದ್ದನಂತೆ. ಮುಂಬಯಿಗೆ ಹುಡುಗಿ ಹೊರಟು, ಏಳು ವಾರಗಳ ಬಳಿಕ ಅಲ್ಲಿಗೆ ಬಂದು ತಲಪಿದಳು.

ಅವಳ ಪ್ರಣಯಿಯ ಮೇಲೆ ಇಂಡಿಯಾ ಸರಕಾರದ ನಿರ್ಬಂಧಕಾಜ್ಞೆಯಿದ್ದು ಆತ ಅಹಮ್ಮದ್‌ನಗರದ ತುರಂಗದಲ್ಲಿದ್ದ. ಮುಂಬಯಿಯ ಜ್ಯೂ ಡಾಕ್ಟರೊಬ್ಬನ ಸಹಾಯದಿಂದ ಆ ಹುಡುಗಿ ತನ್ನವನನ್ನು ಬಿಡುಗಡೆಪಡಿಸಿದಳು. ಇಂದಿಗೆ ಉತ್ತರ ಭಾರತದಲ್ಲಿ, "ಎಲ್ಲೋ ಒಂದೆಡೆ," ಅವರು ವಿವಾಹವಾಗಿ ಸುಖದಿಂದಿದ್ದಾರೆ.

ಆಕೆ, ಇಂಗ್ಲೆಂಡಿನಲ್ಲಿ ಮನೆಗೆಲಸದ ದಾದಿಯಾಗಿದ್ದರೂ ಲಂಡನಿನ ಜೀವನದ ಕುರಿತು, ವಾರ್ತಾಪತ್ರಿಕೆಗಳ ಕುರಿತು, ರಾಜಕಾರಣ–ಚಲನಚಿತ್ರ ಮತ್ತು ಜಗತ್ತಿನವರ ವ್ಯವಸ್ಥೆಗಳ ಕುರಿತು ಚೆನ್ನಾಗಿ ಮಾತನಾಡುತ್ತಿದ್ದಳು.

ಫ್ರೆಂಚ್–ಜರ್ಮನ್ ಭಾಷೆಗಳನ್ನು ಕಲಿಸುವ "ಟೀಚರ್" ಆಗುವ ಯೋಗ ಬಿಡುವಿರುವಾಗ ದೊರಕಿಸಿಕೊಳ್ಳಲು ಆಕೆ ನಿಶ್ಚಯಮಾಡಿದ್ದಾಳೆ.

ಒಬ್ಬ ಪ್ರೊಫೆಸರು!

ಇನ್ನೊಮ್ಮೆ ಮುಂಬಯಿಯಲ್ಲಿ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದ ಜರ್ಮನ್ ಡಾಕ್ಟರೊಬ್ಬನನ್ನು ಕಂಡೆ. ಈತ ಯೆಹೂದ್ಯನಲ್ಲ;–ಶುದ್ಧ ಆರ್ಯ. ಮ್ಯೂನಿಕ್ಕಿನ ಕಣ್ಣಿನ ಒಂದು ಆಸ್ಪತ್ರೆಯಲ್ಲಿ ಅವನು ಸಹಾಯಕ ಸರ್ಜನ್ ಆಗಿ ಇದ್ದನಂತೆ.

ಇವನು 'ಪಕ್ಕಾ' ವಿಜ್ಞಾನಿ. ಎಲ್ಲಾ ಜಾತಿಗಳಿಗಿಂತಲೂ ಜರ್ಮನ್ ಜಾತಿಯೇ ಮಿಗಿಲೆಂಬ ಹಿಟ್ಲರನ ನಿರ್ಣಯದಲ್ಲಿ ಎಳ್ಳಷ್ಟೂ ವಿಶ್ವಾಸವಿಲ್ಲದವನು. ಇದರಿಂದಾಗಿಯೇ ಜರ್ಮನಿಯನ್ನು ತ್ಯಜಿಸಬೇಕಾಯಿತು.

ಮ್ಯೂನಿಕ್ಕಿನಿಂದ ಸ್ವಿಜರ್ಲೆಂಡಿಗೆ ಬಂದು, ಅಲ್ಲಿ ನೆಲೆಸುವುದಕ್ಕೆ ಪ್ರಯತ್ನಪಟ್ಟ. ಆದರೆ ಅಲ್ಲಿನ ಸರಕಾರ ಇದಕ್ಕೆ ಆಸ್ಪದವೀಯಲಿಲ್ಲ. ಈ ಪ್ರೊಫೆಸರು, ಪಂಜಮ ದಳದವನಿರಬಹುದೆಂದು ಅದು ಅಂಜಿಕೊಂಡಿತು. ಪ್ರೊಫೆಸರ್ ಬಳಿಕ ಜಿನೇವಾಕ್ಕೆ ತೆರಳಿ, ಮುಂಬಯಿಯ ಕೆಲವು ಸನ್ಮಿತ್ರರ ಆಹ್ವಾನದಂತೆ, ಭಾರತಕ್ಕೆ ಪ್ರಯಾಣ ಬೆಳೆಸಿದ.

ಮ್ಯೂನಿಕ್ಕಿನ ಪಂಡಿತರು

ಪ್ರೊಫೆಸರಿಗೆ ಅಗಾಧ ಪಾಂಡಿತ್ಯ

ಆ ಮಾತು ಈ ಮಾತು ತೆಗೆದಾಗ ಪ್ರೊಫೆಸರ್ ಮಹಾಭಾರತದ ಕಥೆಯಲ್ಲಿ ಕರ್ಣನ ಪಾತ್ರವನ್ನು ತಾನು ಬಹಳ ಮೆಚ್ಚುವುದಾಗಿ ಹೇಳಿ, "ಕುಲವೇನೇ ಇರಲಿ, ನನ್ನ ಅದೃಷ್ಟವನ್ನು ಸಂಪಾದಿಸುವವನು ನಾನು" ಎಂಬ ಅರ್ಥದ ಒಂದು ಸಂಸ್ಕೃತ ಶ್ಲೋಕವನ್ನು ಉದ್ಧರಿಸಿದ.

ಸಂಸ್ಕೃತವನ್ನು ಕಲಿತ ಆರ್ಯ ಮಹಾಶಯ ಈ ಪ್ರೊಫೆಸರ್ ಇವನಿಗೆ ಇಂಗ್ಲಿಷ್ ಬರುತ್ತಿತ್ತು. ಆದರೆ ಈ ಮ್ಯೂನಿಕ್ಕಿನ ಪಂಡಿತರ ಸಂಸ್ಕೃತದ ಉಚ್ಚಾರಣೆ ಭಯಂಕರವಾಗಿತ್ತು.

ಯೆಹೂದ್ಯನಾದರೂ ಜರ್ಮನನೆಂಬ ಸ್ವಾಭಿಮಾನ!

ಮುಂಬಯಿಯಲ್ಲಿ ಇನ್ನೊಬ್ಬ ಜರ್ಮನ್ ಡಾಕ್ಟರನಿದ್ದಾನೆ. ಅವನೂ ಚೆನ್ನಾಗಿ ಸಂಪಾದನೆ ಮಾಡುತ್ತಿದ್ದಾನೆ. ಈತನ ಇಂಗ್ಲಿಷ್ ಭಾಷೆಯನ್ನು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟವಾಯಿತು.

ಹಿಟ್ಲರನ ಅನೀತಿಯನ್ನು ಆತ ಬಲವಾಗಿ ಖಂಡಿಸಿದ. ಹಿಟ್ಲರ್ ರೌರವ ನರಕಯಾತನೆಯನ್ನು ಅನುಭವಿಸುತ್ತಾ ಸಾಯಬೇಕೆಂದು ಅವನ ಆಶಯವಾಗಿತ್ತು.

ಆತ ಯೆಹೂದ್ಯ, ಆದರೂ ತಾನು ಜರ್ಮನನೆನ್ನುವುದಕ್ಕೆ ಅವನಿಗೆ ತುಂಬಾ ಅಭಿಮಾನವಿದೆ.

ಕಾಂಗ್ರೆಸ್ ಈ ಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯಮಾಡದಿರುವುದು ಬಹು ದೊಡ್ಡ ತಪ್ಪು ಎಂದು ಈ ಮಹಾನುಭಾವನ ಅಭಿಪ್ರಾಯವಾಗಿತ್ತು. ಭಾರತದ ರಾಜಕಾರಣದ ಕುರಿತು ಏನೇನೂ ಪರಿಜ್ಞಾನವಿಲ್ಲದ ಈ ಡಾಕ್ಟರೊಡನೆ ನಾನೆಷ್ಟು ವಾದಿಸಿದರೂ ಪ್ರಯೋಜನ ದೊರೆಯಲಿಲ್ಲ.

ಭಾರತದ ಸತ್ಕಾರ ಪ್ರಿಯತೆ

ಈ ಬಡ ಭಾರತವು,–ಎಷ್ಟು 'ಬಡ' ವಾಗಿದ್ದರೂ ಕೂಡ ಇನ್ನೂ ತನ್ನ ಅತಿಥಿ ಸತ್ಕಾರ ಪ್ರಿಯತೆಯನ್ನು ಕಳೆದುಕೊಂಡಿಲ್ಲ. ಹಾಗೆಯೇ ನೂರಾರು ಮಂದಿ, ಯುರೋಪಿನ ಹಲವಾರು ರಾಷ್ಟ್ರಗಳಿಂದ ನಾಜಿಗಳ ಹಿಡಿತದಿಂದ ತಪ್ಪಿಸಿಕೊಂಡು ಬಂದು, ಭಾರತದಲ್ಲಿ ಆಶ್ರಯಪಡೆಯುತ್ತಿರುವುದು.

ಇಲ್ಲಿಗೆ ಬಂದವರಲ್ಲಿ ಹೆಚ್ಚಿನವರು ಒಂದಲ್ಲ ಒಂದು ಉದ್ಯೋಗವನ್ನು ಸಂಪಾದಿಸಿ ಚೆನ್ನಾಗಿ ಜೀವನ ನಡೆಸುವವರೇ ಆಗಿದ್ದಾರೆ. ಉಳಿದವರಾದರೂ ಉಪವಾಸ ಬೀಳುತ್ತಿಲ್ಲ. ಉದರಭರಣ ಕಾರ್ಯ ಸಾಂಗವಾಗಿ ನೆರವೇರುತ್ತಲಿದೆ.

ವೆಂಕಟಗಿರಿ ಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖಚಿತವಾಗುವಂತೆ ಗ್ಲೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ.

ಈ ಪದ್ಯಗಳಿರುವ ೧೫ ಅಧ್ಯಾಯಗಳು. ದಪ್ಪವಾದ ಕಾಗದ, ಮುದ್ದಾದ ಮುದ್ರಣ. ಬೆಲೆ ರೂಪ್ಯಾ ೧–೮–೦. ಟಪ್ಪಾಲು ಹಾಸಲು ಬೇರೆ. ಸಂಸ್ಕೃತ ಭವಿಷ್ಯತ್ಪುರಾಣದಿಂದ ಸ್ವರ್ಗಸ್ಥರಾದ ಮೂಲ್ಕಿ ಕವಿ ರಾಮಕೃಷ್ಣಯ್ಯನವರಿಂದ ಭಾಮಿನಿಷಟ್ಪದಿಯಲ್ಲಿ ಕನ್ನಡಿಸಲ್ಪಟ್ಟಿತು. ಸುಲಭ ಶೈಲಿ, ಸರ್ವರಿಗೂ ಅನುನಿತ್ಯದ ಪಠನೆ ಪುಸ್ತಕವಾಗಿರಲು ಉಚಿತವಾಗಿರುವುದು. ಸೈಜು ಡೆಮ್ಮಿ ಅಷ್ಟಪತ್ರದ 168 ಪುಟಗಳು. ಕೆತ್ತಾನಾರಿನ ಬೈಂಡು. ಪ್ರತಿಯೊಂದಕ್ಕೆ ರೂ. 1–8–0. ಟಪ್ಪಾಲು ಹಾಸಲು ಬೇರೆ.

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

Please write to us for your needs in

RUBBER STAMPS

Monogram Seals, Peon Badges, Sign Boards, Marble Boards, Facsimile Stamps, Embossing, Etc.

CROWN RUBBER STAMP CO.,

A 17, Balmatta Road (Estd: 1926) MANGALORE.

(Among the list of Mysore Govt.'s approved Firms.)
Certified by the Agent of India, Ceylon.

ನೂತನ ಪಾಠಪಟ್ಟಿಗನುಸಾರವಾಗಿ ಪ್ರಕಟಿಸಲ್ಪಟ್ಟ ಈ ಕೆಳಗಿನ ನಮ್ಮ ಹೊಸ ಪುಸ್ತಕಗಳು ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಕ್ಲಾಸು ಉಪಯೋಗಕ್ಕಾಗಿ ಮಂಜೂರಾತಿಯನ್ನು ಹೊಂದಿವೆ. (Vide consolidated list of approved books Fort St. George Gazette, dated 30—4—1940, pages 59, 60, 62, 68, 70, 71, 86, 87, 88, 92 & 155.)

(1) **ಹೊಸ ಕನ್ನಡ ಪಾಠಮಾಲೆ**—1ರಿಂದ 5ನೇ ದರ್ಜೆಯ ವರೆಗೆ.
(2) **ನೂತನ ಬಾಲ ಗಣಿತ**—3ನೇ ದರ್ಜೆಯಿಂದ 8ನೇ ದರ್ಜೆಯ ವರೆಗೆ
(3) **ಭಾರತದ ಇತಿಹಾಸ**—6ನೇ, 7ನೇ ಮತ್ತು 8ನೇ ದರ್ಜೆಗಳಿಗೆ
(4) ಡಿ ಡಿ I, II, III, IV ಮತ್ತು V ಫಾರ್ಮುಗಳಿಗೆ.
(5) **ನೂತನ ಸಾಮಾನ್ಯ ಗಣಿತ**—IV ಫಾರ್ಮಿಗೆ.

ಹೊಸ ಕನ್ನಡ ಪಾಠಮಾಲೆಯ 6, 7, ಮತ್ತು 8ನೇ ದರ್ಜೆಯ ಪುಸ್ತಕಗಳು ಅಚ್ಚಿನಲ್ಲಿವೆ. ಹೆಚ್ಚಿನ ಮಾಹಿತಿಗೆ ನಮಗೆ ಬರೆದುಕೊಳ್ಳಿರಿ:—

ಬಾಲಸಾಹಿತ್ಯ ಮಂಡಲ, ಲಿಮಿಟೆಡ್, ಮಂಗಳೂರು.

Guaranteed For Purity,.
BEST CASTOR OIL
TASTELESS KP ODOURLESS.
ಶುದ್ಧಮಾಡಿದ ಹರಳೆಣ್ಣೆ ವಾಕರಿಕೆ ರಹಿತ ಇಲ್ಲವೆಂದು ಡಾಕ್ಟರಗಳಿಂದ ಸರ್ಟಿಫೈಮಾಡಿದ್ದು
CASTOR OIL WORKS, COIMBATORE.

K. P. Castor Hair Oil

ಬಹಳ ತಂಪು, ಚೇತನದಾಯಕ, ಉತ್ತಮ ಪರಿಮಳ, ಕೂದಲು ಬೆಳಿಸಲು ಸಹಾಯಕವಾಗುತ್ತಿದೆ. ಕಾಂತಿ ಗೂಡಿಸುತ್ತದೆ. ಕೂದಲು ಬಾಚಿ ಅಣಿ ಮಾಡುವರೆ ನೆರವಾಗುತ್ತದೆ.

ಅತ್ಯುತ್ತಮವಾದ ಕೂದಲು ಶಕ್ತಿವರ್ಧಕ ಒಮ್ಮೆ ಪರೀಕ್ಷಿಸಿರಿ.



ಯೋಗ್ಯ ದರದಲ್ಲಿ ಉತ್ತಮ
ದೇವಪೂಜಾ ಸಾಮಗ್ರಿ
ಅಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.
ಸಚಿತ್ರ ಕ್ಯಾಟಲಾಗ್ ಫುಕಟಾ ಕಳುಹಿಸಿ ಕೊಡುವೆವು. ಈ ಚಿತ್ರದಲ್ಲಿ ಕಾಣುವ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ.
ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ
ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.
Kalmanje Vyasacharya, Brass-ware Merchant, UDIPI, S. K.

ಕೇಸ್ಟ್ರೋಫೀನ್
ಹರಳೆಣ್ಣೆ ಚಾಕ್‌ಲೇಟ್‌ಗಳು.
ಮಕ್ಕಳಿಗೂ ಹಾಗೂ ಜವ್ವನಿಗರಿಗೂ ಏಕಪ್ರಕಾರವಾಗಿ ಪೂರ್ಣ ನಿರುಪದ್ರವಿ, ಸಿಹಿ, ಆನಂದದಾಯಕ, ಪ್ರಯೋಜನಕಾರಿಯಾದ ಉತ್ತಮ ಚೇತನದಾಯಕ ಬೇಧಿ ಔಷಧಿ.
ಉದರಶೂಲೆಗೊಳಿಸದು ಮತ್ತು ಚಟಹಿಡಿಸದು. ಸೀಸೆಗಳಲ್ಲಿ 25, 50 ಮತ್ತು 100 ಚಾಕ್‌ಲೇಟುಗಳು, ಹಾಗೂ 2 ಬಿಲ್ಲೆಗಳ ಪ್ಯಾಕೇಟುಗಳು.
ಪ್ರತಿ ಒಂದಕ್ಕೆ ಒಂದಾಣೆ.
ಎಲ್ಲಾ ಔಷಧಿ ವ್ಯಾಪಾರಿಗಳಲ್ಲೂ, ಸ್ಟೋರ್‌ಗಳಲ್ಲೂ ಸಿಗುತ್ತದೆ.
ಕೇಸ್ಟ್ರೋಫೀನ್ ಮೆನ್ಯುಫೇಕ್ಚರಿಂಗ್ ಕಂಪೆನಿ,
ಪಿ. ಒ. ಬಾಕ್ಸ್ ನಂಬ್ರ 88, ಕರಾಚಿ.

ಮಕ್ಕಳಿಗೆ
ಡೋಂಗರೆ ಇವರ ಪುಷ್ಟಿಮಲ್ಟಾ

ಆದರ್ಶಕರವಾದ ಪೌಷ್ಟಿಕ.
ಇದು ಮಧುರವಿದ್ದು, ಇದರಲ್ಲಿ ಮಕ್ಕಳ ಬೆಳವಣಿಗೆಗೆ ಬೇಕಾಗುವ ಯೋಗ್ಯ ಔಷಧಗಳು ಇರುತ್ತವೆ.

ಜಗತ್ತಿನ ದೃಷ್ಟಿ ಈ ಕಡೆಗೆ

(ಇನೇ ಪುಟದಿಂದ ಮುಂದುವರಿದುದು)

ಔಟ್' ಒಂದನ್ನು ಹೊರತು, ಉಳಿದ ಎಲ್ಲಾ ಎಷಯಗಳಲ್ಲಿಯೂ ಮೋಸ್ಕೋ ಯಥಾವತ್ತಾಗಿ ತನ್ನ ಜೀವನವನ್ನು ಸಾಗಿಸುತ್ತಿದೆ. ಅಸಾಮಾನ್ಯ ರಕ್ಷಣೋಪಾಯಗಳಿಂದ ಜರ್ಮನ್ ವಿಮಾನಗಳು ಎಷ್ಟು ಬಾರಿ ಯತ್ನಿಸಿದರೂ, ಮೋಸ್ಕೋದ ಮೇಲೆ ದಾಳಿಮಾಡಿ ಹಲ್ಲೆ ನಡೆಸುವುದಕ್ಕೆ ಅದು ಶಕ್ತವಾಗಲಿಲ್ಲ.

ರಷ್ಯದ ಹೆಬ್ಬಾಗಿಲು ಲೆನಿನ್‌ಗ್ರೇಡ್!

ಲೆನಿನ್‌ಗ್ರೇಡ್, ಪಶ್ಚಿಮ ಸಮುದ್ರಗಳಿಂದ ರಷ್ಯವನ್ನು ಪ್ರವೇಶಿಸುವುದಕ್ಕೆ ಒಂದು ಹೆಬ್ಬಾಗಿಲಾಗಿಯೇ ಇದೆಯೆಂದರೆ ತಪ್ಪಾಗಲಾರದು.

ಲೆನಿನ್‌ಗ್ರೇಡ್, ರಷ್ಯನರೆಲ್ಲರ ಪ್ರೀತಿ ಪಾತ್ರವಾದ ಪಟ್ಟಣ. ರಷ್ಯದಲ್ಲಿ,—ಏಕೆ?—ಜಗತ್ತಿನಲ್ಲೇ ಒಂದು ಹೊಸ ಯುಗವನ್ನು ಲೆನಿನ್ ಸೃಷ್ಟಿಸಿದುದು,—ಮೊದಲ ಬಾರಿಗೆ ಸೃಷ್ಟಿಸಿದುದು ಈ ಊರಿನಲ್ಲಿ. ಲೆನಿನ್‌ಗ್ರೇಡ್ ಇಂದಿಗೂ ಅಜೇಯವಾಗಿ ಉಳಿದಿದೆ. ಅದನ್ನು ಗೆಲ್ಲುವುದಕ್ಕೆ, ಈ ತನಕ ಯಾರೂ ಸಮರ್ಥನಾಗಿಲ್ಲ. ಭೂಪಟದತ್ತ ದೃಷ್ಟಿ ಬೀರಿದೊಡನೆಯೇ ಲೆನಿನ್‌ಗ್ರೇಡಿನ ಪ್ರಾಮುಖ್ಯತೆ ವ್ಯಕ್ತವಾಗದಿರದು. ಹಾಗೆಂದೇ, ರಷ್ಯನರು ಅದನ್ನು ಅತಿ ಜಾಗರೂಕತೆಯಿಂದ ರಕ್ಷಿಸುತ್ತಿರುವರು. ಹಿಟ್ಲರರ ಎದ್ಯುತ್ಸವರಕ್ಕೆ ಅದು ಬಲಿ ಬಿದ್ದಿರುವುದಿಲ್ಲ. ಜರ್ಮನ್ ಸೇನೆಗಳು, ಲೆನಿನ್‌ಗ್ರೇಡನ್ನು ಸಂಪೂರ್ಣ ಸುತ್ತುವರಿದಿದೆ ಎಂದು ಜರ್ಮನರೆಂದರೂ ಆ ಪಟ್ಟಣದ ರಕ್ಷಣೆಯ ಕುರಿತು, ನಿರಾಶರಾಗಬೇಕಿಲ್ಲ. ಅದೂ ಆ ನಗರದ ಕುರಿತಾದ ಚಿಂತೆ ತಪ್ಪಿಲ್ಲ!

ಕೈತಪ್ಪಿದ ಕೀವ್!

ಕೀವ್ ಈಗ ರಷ್ಯನರ ಕೈಯಲ್ಲಿಲ್ಲ. ಅವರು ಅದನ್ನು ತ್ಯಜಿಸಿದ್ದಾರೆ. ಜರ್ಮನ್ ಸೈನಿಕರು, ತಾವು ಅದನ್ನು ಗೆದ್ದೆವೆಂದು ಹೇಳಿಕೊಳ್ಳುತ್ತಿದ್ದಾರೆ.

ಫಲವತ್ತಾದ ಯುಕ್ರೇನ್ ಭೂಮಿಯ ಪ್ರಧಾನ ನಗರವಾದ ಕೀವಿನ ಪ್ರಾಮುಖ್ಯತೆಯು ಸ್ವಲ್ಪವೇನೂ ಅಲ್ಲ. ಕೀವಿನ ಪತನದಿಂದಾಗಿ ರಷ್ಯಕ್ಕೇನೂ ಹಾನಿಯಾಗಿರುವುದಿಲ್ಲವೆಂದು ಹೇಳಿದರೆ, ಅಸತ್ಯವನ್ನು ನುಡಿದಂತಾಗುವುದು. ಕೀವನ್ನು ಹಿಡಿದು, ಮುಂದೆ ಸಾಗಿರುವ ಹಿಟ್ಲರ್, ಪಶ್ಚಿಮ ಯುಕ್ರೇನನ್ನೆಲ್ಲಾ ಅಂಕಿತಕ್ಕೆ ತಂದಂತಾಯಿತು. ಈಯೊಂದು ಉಪಕಾರವಲ್ಲದೆ ಬೇರೇನನ್ನೂ ಕೀವ್ ಜರ್ಮನರಿಗೆ ಮಾಡಲಿಲ್ಲ. ತಾವು ಕೀವನ್ನು ತ್ಯಜಿಸುವಾಗ, ರಷ್ಯನರು ಪೈರಿಗಳ ಉಪಯೋಗಕ್ಕೆ ಬೀಳಬಹುದಾದಂತಹ ಎಲ್ಲಾ ವಸ್ತುಗಳನ್ನೂ ನಾಶಗೊಳಿಸಿದ್ದರು. ಸ್ಮಶಾನ ಸಮಾನವಾಗಿದ್ದ ಕೀವನ್ನು ಜರ್ಮನ್ ಭಟರು ಪ್ರವೇಶಿಸಿದರು,—ಅಷ್ಟೇ.

ದುರ್ಭೇದ್ಯ ಒಡೆಸ್ಸಾ!

ಜಗತ್ತಿನ ದೃಷ್ಟಿ ಕೋನವನ್ನು ತಮ್ಮತ್ತ ಸೆಳೆದಿರುವ ನಾಲ್ಕು ನಗರಗಳಲ್ಲಿ, ಒಡೆಸ್ಸಾ ಕೊನೆಯದು. ಇದನ್ನು ಕಪ್ಪು ಸಮುದ್ರದ ಲೆನಿನ್‌ಗ್ರೇಡ್ ಎಂದರೂ ಸಲ್ಲುವುದು. ಇದರ ರಕ್ಷಣೆಗಾಗಿ ತುಂಬಾ ಜಾಗ್ರತೆಯನ್ನು ರಷ್ಯನರು ವಹಿಸಿದ್ದಾರೆ. ಅದರ ಸುತ್ತು ಮೂರು ಬಲವಾದ ಸೇನೆಗಳು ನಿಂತಿವೆ. ಈ ಕೋಟೆಯನ್ನು "ಸ್ಟಾಲೋಡ್" ಎಂದು ಕರೆಯುತ್ತಾರೆ. ಸ್ಟಾಲಿನ್ ಮತ್ತು ಒಡೆಸ್ಸಾ ಎಂಬ ಎರಡು ಪದಗಳಿಂದ ಈ ಹೊಸ ಶಬ್ದ ಉತ್ಪನ್ನವಾಗಿರುತ್ತದೆ. ಸ್ವಿಜರ್ಲೆಂಡಿನ ಒಂದು ಪತ್ರಿಕೆಯು ಹೇಳಿದಂತೆ, "ಒಡೆಸ್ಸದ ಮೇಲೆ ಅಭಿಯೋಗ ಮಾಡುವುದೆಂದರೆ ಬರಿ ಏದೆಯಿಂದ ಉಕ್ಕಿನ ಕವಚದೊಡನೆ ಉರುಡಾಡಿದಂತೆಯೇ ಸರಿ." ಕಪ್ಪು ಸಮುದ್ರದಲ್ಲಿ ರಷ್ಯನ್ ಹಡಗುಪಡೆಯ ಶಕ್ತಿ ಇರುವ ತನಕ, ಈ ಒಡೆಸ್ಸವು ಶರಣುಹೋಗದು.

ರಷ್ಯದಲ್ಲಿಯುದ್ದದ ಪರಿಸ್ಥಿತಿ ಹಲವು ವಾರಗಳ ತನಕ ಬದಲಾಗಲಾರದು. "ಬೊಂಬೇ ಕ್ರಾನಿಕಲ್" ಪತ್ರಿಕೆಯ ಯುದ್ಧವಿಮರ್ಶಕರಾದ ಶ್ರೀ। ಎನ್. ಜಿ. ಜೋಗರು ಹೇಳುವಂತೆ, ರಷ್ಯದಲ್ಲಿ ಜರ್ಮನಿಯ ಜಯಾಪಜಯಗಳು ಬ್ರಿಟನ್ ಅಮೇರಿಕಗಳು ರಷ್ಯಕ್ಕೆ ನೀಡುವ ಸಹಾಯವನ್ನು ಹೊಂದಿಕೊಂಡಿವೆ.

ನಾಮಕರಣ

ಸರ್. ಅಕ್ಬರ್ ಹೈದ್ರಿಯವರು, ಸರ್. ಫಿರೋಜ್‌ಖಾನ್ ನೂನರವರು ಹಾಗೂ ಶ್ರೀ। ಎನ್. ಆರ್. ಸರ್ಕಾರರವರು ಕೌನ್ಸಿಲ್ ಆಫ್ ಸ್ಟೇಟಿಗೂ, ಶ್ರೀ। ಎಂ. ಎಸ್. ಅಣೆ, ಸುಲ್ತಾನ್ ಅಹಮ್ಮದ್ ಮತ್ತು ಸರ್. ಪಿ. ಎಚ್. ಮೂಡಿ ಇವರು ಸೆಂಟ್ರಲ್ ಎಸೆಂಬ್ಲಿಗೂ ನಾಮಕರಣಹೊಂದುವರೆಂದು ತಿಳಿದು ಬಂದಿದೆ.

ನೋಟೀಸು

ಮಂಗಳೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

R. E. P. No. 284/1941
in S. C. 563/1939

ಕಾವೇರಿ ಅಮ್ಮ —**ಅರ್ಜಿದಾರ**
ಮತ್ತು
ಐತು ಶೆಟ್ಟಿ ಕೂಡಾ—**ರೆಸ್ಪೊಂಡೆಂಟರು**

3ನೇ ರೆಸ್ಪೊಂಡೆಂಟಗೆ:—ಕೃಷ್ಣ ಶೆಟ್ಟಿ, ಕೊರಗ ಶೆಟ್ರ ಅಳಿಯ, ಮಂಗಳೂರು ತಾಲೂಕು ಬೈಕಂಪಾಡಿ ಗ್ರಾಮಸ್ತ.

ಮೇಲೆ ಹೇಳೋಣಾದ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವಳಾದ ಅರ್ಜಿದಾರಳು ಸ್ಥಿರಾಸ್ತಿ ಎಕ್ರಯದ ಬಗ್ಯೆ ಅರ್ಜಿ ಮಾಡಿದ್ದಾಳೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಷರತುಗಳನ್ನು ನಿರ್ಣಯಿಸಲಿಕ್ಕೆ 1941ನೇ ಇಸವಿ ಅಕ್ಟೋಬರ ತಿಂಗಳು 21ನೇ ತಾರೀಕು ನಿಶ್ಚಯಿಸೋಣಾಗಿದೆ ಎಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ. ಹಾಗೆ ನೀವು ಹಾಜರಾಗಿ ನಿಮ್ಮ ಆಕ್ಷೇಪವೇನಾದರೂ ಇದ್ದರೆ ಸಾಕದಿದ್ದಲ್ಲಿ ನಿಮ್ಮ ಗೈರು ಹಾಜರು ನಿಶಿ ಸದ್ರಿ ಷರತುಗಳನ್ನು ನಿಶ್ಚಯಿಸೋಣಾದೀತು ಎಂದು ಈ ಮೂಲಕ ನಿಮಗೆ ತಿಳಿಸೋಣಾಗುತ್ತದೆ.

ಎಸ್. ವೆಂಕಟ್ರಾವ್,
ಅರ್ಜಿದಾರಳ ಕಡೆ ವಕೀಲ್.
ಮಂಗಳೂರು, ತಾ. 25-9-1941.

అమృతాంజన

తలనేవేదనె, శిరోవేదనె, ఉళుకు, కుత్తిగె భుజ హల్లు వేదనెగళిగూ, ఎదెనోవు, ఘాయగళు, బాతుకొళ్ళువుదు, చేళు విష మొంతాద బేనె, పక్షవాత, పొడిమె మొదలాద ఎల్లా రోగగళిగూ సిద్ధౌషధ.

(REGD.)

ಹುಳುಕಡ್ಡಿ ಮದ್ದು

ಕಜ್ಜಿ, ತುರಿಕೆ; ತುರಿಕಜ್ಜಿ, ಹುಳುಕಡ್ಡಿ, ಪಿತ್ಥಉಪದ್ರವ, ತಲೆಹುಣ್ಣು, ವ್ರಣ ಮೊದಲಾದ ಎಲ್ಲಾ ಚರ್ಮವ್ಯಾಧಿಗಳಿಗೂ ಉತ್ತಮ ಔಷಧ.

ಅಮೃತಾಂಜನ, ಲಿಮಿಟೆಡ್

ಬೊಂಬಾಯಿ ——— ಮದ್ರಾಸ್ ——— ಕಲ್ಕತ್ತಾ

ಮಂಗಳೂರಲ್ಲಿ ಶಾ ಕಂಪೆನಿಯಲ್ಲಿ, ದೊರೆಯುವುದು.

THE PIE-MONEY BANK, LTD.,

Maidan Road, Mangalore.

Undertakes all kinds of Banking Business.

Current account at 2½% per annum.

Savings Bank Deposits at 4½% per annum.

FIXED DEPOSITS.

For 2 years 5%. 1 year 4½%. For 6 months 4%. 3 months 3½%.

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:— ***K. R. Guru,*** *Managing Director.*

ವಾಜೀಕರಣ ತೈಲ

ವೀರ್ಯವು ಪಕ್ವವಾಗುವುದಕ್ಕೆ ಪೂರ್ವದಲ್ಲಿ ಭೋಗ ಮಾಡುವುದರಿಂದುಂಟಾಗುವ ರೋಗಗಳಿಗೂ ಮಿತಿಮೀರಿ ಭೋಗ ಮಾಡುವುದರಿಂದಲೂ ದುಷ್ಟವಾದ ಭೋಗದಿಂದಲೂ ಹಸ್ತ ಪ್ರಯೋಗದಿಂದಲೂ ಮತ್ತು ಇವುಗಳಲ್ಲದೆ ಅನೇಕ ಇತರ ಕಾರಣಗಳಿಂದ ಏರ್ಪಟ್ಟ ನಪುಂಸಕತ್ವವನ್ನು ಸಮೂಲದಿಂದ ಕಿತ್ತುಹಾಕುವುದೇ ಈ ತೈಲದ ಉತ್ಕೃಷ್ಟವಾದ ಗುಣವು. ಜನನೇಂದ್ರಿಯದ ಬಿಗಿ ತಪ್ಪಿಹೋದರೂ ಅಥವಾ ಸಂಪೂರ್ಣವಾಗಿ ನಪುಂಸಕತ್ವವನ್ನು ಹೊಂದಿದರೂ ಈ ತೈಲವು ಯತಾರ್ಥವಾಗಿಯೂ ಶೀಘ್ರವಾಗಿಯೂ ಬಲವನ್ನುಂಟುಮಾಡುವುದು.

ಅರ್ಧ ತೊಲೆ ಸೀಸೆ 1ಕ್ಕೆ ರೂ. 5—0—0

ಆತಂಕನಿಗ್ರಹ ಫಾರ್ಮೆಸಿ, ಚಿಕ್ಕಪೇಟೆ ಚೌಕ, ಬೆಂಗಳೂರು ಸಿಟಿ.

ಏಜಂಟ್ಸ್:—ಪರ್ಲ್ ಎಂಡ್ ಸನ್ಸ್, ಮಂಗಳೂರು.

CONFIDENCE

IS A GREAT ASSET IN BUILDING BUSINESS.

THE

Bombay Life Assurance Co., Ltd.

has created Public Confidence by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to Represent, it pays you to consult us:—

KOCHIKAR BROTHERS, LTD.,

CHIEF AGENTS FOR SOUTH INDIA—INCLUDING INDIAN STATES

Udipi, Mangalore, Calicut, Madras, Trivendrum, Bangalore City, & Bombay 4.

Edited and Published by B. Vittal Rau at the Kanteerava Office, Maidan North Road, Mangalore
Printed by M. Baburaya Prabhu, B. A., at the Mangalore Press, Car Street, Mangalore